ಅಪರಂಜಿ

ತಿಳಿನಗೆಯ ಕಾರಂಜಿ




ಬೆಳ್ಳಿ ಹಬ್ಬದ ವರ್ಷ

ಜನವರಿ - 2008



ಇವರೇರಿ, ಅಪ್ಪಟಮ್ಮ ಅಂತ. ನ್ಯಾಷನಲ್
ಕಾಂಟೆಸ್ಟ್‌ನಲ್ಲಿ 'ನೀರು ಕಾಯಿಸೋ' ರೆಸಿಪಿ
ಬರೆದು ಮೊದಲ ಬಹುಮಾನ ಗೆದ್ದೋರು!



ಬಿಡಿ ಪ್ರತಿ: ರೂ.10.00

ಅಪರಂಜಿ

ತಿಳಿನಗೆಯ ಕಾರಂಜಿ



ಚಂದಾ ವಿವರ:
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರ ಜೋಡಣೆ:
ಒಮೇಗಾ ಲೇಸರ್ ಟೆಕ್




ಸಂಪುಟ 25
ಸಂಚಿಕೆ - 4
ಜನವರಿ - 2008

ಈ ಸಂಚಿಕೆಯಲ್ಲಿ .....

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: aparanji@hotmail.com website: aparanjimag.com

ಸಂಪರ್ಕ ವಿಳಾಸ: ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 808-26688488. email: brmurthy@dataone.in



○ ಪ್ರಕಾಶ್

ಸಕ್ರಮ ಅನ್ನೋ ಪದ ಕನ್ನಡಕ್ಕೆ ಸೇರಿಸಿದ್ದು ಯಾವಾಗ ಅಂತ ಒಬ್ಬರು ಪ್ರಶ್ನಿಸಿದ್ದಾರೆ?

★★★

ಕವಲು ದಾರಿಯಲ್ಲಿ ರಾಜಕೀಯ ಪಕ್ಷಗಳು - ಪಕ್ಷಗಳು

● ಹೌದು ನೇರ ಮಾರ್ಗ ಮರೆತಂತಿದೆ

★★★

ಭಾರತದ ಕ್ರಿಕೆಟ್ ಕೋಚ್ ಗ್ಯಾರಿ ಕರ್ಸ್ಟರ್ನ್ ನೇಮಕ - ಕ್ರೀಡಾ ಸುದ್ದಿ

● ಹೆಸರನ್ನು ಕಷ್ಟರ್ನ್ ಅಂತ ಬದಲಾಯಿಸುತ್ತಾರೋ

★★★

ನಿಮ್ಹಾನ್ಸ್ ಬಳಿ ಏಳೂವರೆ ಅಡಿ ಹೆಬ್ಬಾವು - ಸುದ್ದಿ

● ಪಾಪ, ತನ್ನ ಕಷ್ಟಗಳನ್ನು ಹೇಳಿಕೊಳ್ಳಲು ಬಂದಿತ್ತೇನೋ

★★★

ಚುನಾವಣೆ ನಿಷ್ಠುರ ಕುಮಾರ್ ಕಡೆಗೆ - ಸುದ್ದಿ

● ನಿಷ್ಠೆ ಅನ್ನುವ ಪದವನ್ನೇ ಬದಲಾಯಿಸಬೇಕು

★★★

ಕ್ರೆಡಿಟ್ ಕಾರ್ಡ್‌ಗಳಿಂದ ಫೋನ್ - ಪತ್ರಿಕೆ

● ಅವನ್ನು Discredit ಕಾರ್ಡ್‌ಗಳೆಂದು ಕರೆಯಬೇಕು

★★★

ಸಕ್ರಮಕ್ಕೆ ಕಟ್ಟಿದ ಹಣ, ಚಿಂತೆ ಬೇಡ, ನಗರಪಾಲಿಕೆ ಹೇಳಿಕೆ - ಪತ್ರಿಕೆ

● ಹೌದು ಅದು 'ಚಿಂತಾತೀತ'

★★★

ಬೇಂದ್ರೆ ದಾರ್ಶನಿಕ ಕವಿ - ಹೇಳಿಕೆ


● Better late than never ಅಂತ ಅಪರಂಜಿ ಪಲುಕಿದಳಂತೆ

★★★

ಬುಡ ಸಮೇತ ದಳ ಕೀಳಲು ಅಸಾಧ್ಯ - ಮಾಜಿ ಪ್ರಧಾನಿಗಳು

● ಸರಿಯೇ, ರೆಂಬೆಗಳು ಕೈಗೆ ಸಿಕ್ಕಬೇಕಲ್ಲ

★★★



ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯಸಾಹಿತ್ಯ

- ಕು.ಗೋ.

ಯಕ್ಷಗಾನ ಹಿರಿಯ ಅರ್ಥದಾರಿಗಳೆಂದೇ ಪ್ರಸಿದ್ಧರಾದವರು ತುದಿಯಡ್ಕ ವಿಷ್ಣಯ್ಯಾ. ಇವರು ಒಬ್ಬ ಪಕ್ಕ ಸಾಹಿತಿ ಎಂದು ಗೊತ್ತಾದುದು ಅವರ 'ದೊರೆಯ ಪರಾಜಯ ಮತ್ತು ಇತರ ಕತೆಗಳು' ಎಂಬ ಪುಸ್ತಕ ಪ್ರಕಟವಾದ ಮೇಲೆ. 1951ರಲ್ಲಿ ಇವರ ಮೊದಲ ಕತೆ ನವಭಾರತದಲ್ಲಿ ಪ್ರಕಟವಾಯಿತು. 18 ವರ್ಷಗಳು ಕಳೆದ ಮೇಲೆ ಮತ್ತೊಂದು ಕತೆ ಪ್ರಕಟವಾಯಿತು. ಆಮೇಲೆ ಅವರು ಕತೆಗಳ ಸುದ್ದಿಗೇ ಹೋಗಲಿಲ್ಲ. ಎ.ಎನ್. ಮೂರ್ತಿರಾಯರ 'ದೇವರು' ಕೃತಿಗೆ ಪ್ರತಿಕ್ರಿಯೆ ರೂಪದಲ್ಲಿ ಅವರ 'ದೇವರು ಇಲ್ಲ?' ಪುಸ್ತಕ ಬಂತು. ಹಾ.ಮಾ.ನಾ ರ ಕಣ್ಣಿಗೆ ಬಿತ್ತು. ಅವರು ತುದಿಯಡ್ಕರನ್ನು ಪ್ರಶಂಸಿಸಿ ಬರೆಯಲು ಒತ್ತಾಸೆ ಮಾಡಿದರು. ಆಮೇಲೆ ಬಂದ ಕತೆಗಳೇ 'ತಾಂಬೂಲ ಚರ್ವಣ ವೈಭವ' ಮತ್ತು 'ಮಣಿಗಾರನ ಪರಾಜಯ.' ಸುಮಾರು ಆರು ಏಳು ದಶಕಗಳ ಹಿಂದೆ ನಡೆದಿರಬಹುದಾದ ಘಟನೆಗಳನ್ನು ಆಧರಿಸಿ ಅವರು ಕೆಲವು ಕತೆಗಳನ್ನು ಬರೆದರು. ಇದು ನಾ. ಮೊಗಸಾಲೆಯವರ ಗಮನಕ್ಕೆ ಬಂದು 'ದೊರೆಯ ಪರಾಜಯ ಮತ್ತು ಇತರ ಕತೆಗಳು' 2001ರಲ್ಲಿ ಪ್ರಕಟವಾಗಿ ಕೆಲವೇ ತಿಂಗಳುಗಳಲ್ಲಿ ಪ್ರತಿಗಳೆಲ್ಲ ಮಾರಾಟವಾದುವು.

ಇದಲ್ಲದೆ 'ಅಬ್ಬರತಾಳ', 'ಜನಸ್ಪಂದನ' ಅವರ ಇತರ ಕೃತಿಗಳು, ಇನ್ನೂ ಒಂದಷ್ಟು ಬಿಡಿಲೇಖನಗಳನ್ನು ಸಂಗ್ರಹಿಸಿ ಪುಸ್ತಕ ತರಬೇಕೆಂಬ ಬಯಕೆ ಇದ್ದಾಗಲೇ ವಿಷ್ಣಯ್ಯನವರು ನಿಧನರಾದರು.

ಮಾಸ್ತಿಯವರ ಸರಳತೆ, ಬಾಗಲೋಡಿಯವರ, ಹಾಸ್ಯ ವಿಡಂಬನೆಗಳನ್ನು ಇವರ ಸಾಹಿತ್ಯದಲ್ಲಿ ಗಮನಿಸಬಹುದು. 'ಮರಣ ಶಯ್ಯೆ' ಅಪರಂಜಿಗಾಗಿ ನಾನು ಆರಿಸಿದ ಕತೆ. ಎಷ್ಟು ಚೆನ್ನಾಗಿ ವಿಷ್ಣಯ್ಯ ನವರು ಕತೆ ಹೇಳುತ್ತಾರೆಂಬುದನ್ನು ಇಲ್ಲಿ ನಾವು ಗಮನಿಸಬೇಕು.

ಮರಣ ಶಯ್ಯೆ

- ವಿಷ್ಣ್ವಯ್ಯ

ರಾಜ ರಸ್ತೆಯಿಂದ ಎಡ್ಡ ತಿರುಗಿ ಅರ್ಧಮೈಲು ನಡೆದು ಹೊಳೆ ದಾಟಿ ಪಂಚಲಿಂಗೇಶ್ವರ ದೇವಸ್ಥಾನಕ್ಕಾಗಿ ಹೋಗುವ ಗ್ರಾಮಸ್ಥರು ವೆಂಕಟೇಶಯ್ಯನವರ ಮನೆಯ ಹತ್ತಿರದಿಂದಲೇ ಹೋಗಬೇಕು. ದಾರಿಯಿಂದ ಅವರ ಮನೆಗೆ ಕೇವಲ ಇಪ್ಪತ್ತು ಮಾರು ದೂರ. ಎಲೆ ಅಡಕೆ ತಿನ್ನುವ ಚಟದವರು, ದಾರಿ ನಡೆದು ಬಾಯಾರಿಕೆ ಆದವರು, ಮಧ್ಯಾಹ್ನದ ಹೊತ್ತಿಗೆ ಅಲ್ಲಿಗೆ ಮುಟ್ಟಿ ಮತ್ತೂ ದೂರ ನಡೆಯಲಿಕ್ಕಿರುವವರು, ಹೆಂಗಸರು ಮಕ್ಕಳನ್ನು ಕರೆದುಕೊಂಡು ಹೋಗುವವರು. ವೆಂಕಟೇಶಯ್ಯನವರ ಮನೆಗೆ ಬಾರದೆ ಇಲ್ಲ. ಎಲೆ ಅಡಕೆ ಬೇಕಾದವರಿಗೆ ಎಲೆ ಅಡಕೆ, ಬಾಯಾರಿದವರಿಗೆ ಮಜ್ಜಿಗೆ ನೀರು, ಮಧ್ಯಾಹ್ನಕ್ಕೆ ಇದ್ದವರಿಗೆ ಊಟ ಸಿಕ್ಕುವ ಭರವಸೆ ಇದ್ದ ಕಾರಣದಿಂದಲೇ ದಾರಿ ಹೋಗುವವರು ವೆಂಕಟೇಶಯ್ಯನವರ ಮನೆಗೆ ಹೆಜ್ಜೆ ಹಾಕುತ್ತಿದ್ದರು. ಪಂಚಲಿಂಗೇಶ್ವರ ದೇವಸ್ಥಾನದ ಕಾಲಾವಧಿ ಜಾತ್ರೆಯ ಸಮಯ ಅವರ ಬಂಧು ಬಳಗದವರಲ್ಲಿ ಕೆಲವರಾದರೂ ಹೆಂಡತಿ ಮಕ್ಕಳು ಸಮೇತ ಬಂದು ನಾಲ್ಕು ದಿನ ಇದ್ದು ಜಾತ್ರೆ ಮುಗಿದ ಮೇಲೆಯೇ ಹೊರಡುತ್ತಿದ್ದರು.

ವೆಂಕಟೇಶಯ್ಯನವರು ಉದಾರಿ, ಪರೋಪಕಾರಿ ಎಂದು ಹೆಸರು ಪಡೆದಿದ್ದರೂ, ಸಣ್ಣ ಹಿಡುವಳಿದಾರರಾದ ಅವರಿಗೆ ಭೂಮಿಯ ಉತ್ಪತ್ತಿ ಖರ್ಚಿಗೆ ಸಾಲದೆ ಹೋಗುತ್ತಾ ಬಂತು. ಮೊದಲು ಅಲ್ಲಲ್ಲಿ ಕೈ ಸಾಲ ಮಾಡಿಕೊಂಡು ದಿನ ತಳ್ಳಿದರೂ ಕೊನೆಗೆ ಉಪಾಯವಿಲ್ಲದೆ ಆಸ್ತಿಯನ್ನು ನಿಡ್ಯೋಡಿಗುತ್ತು ನರಸಿಂಹ ರೈಗಳಿಗೆ ಅಡವು ಮಾಡಿ ಹಣ ಪಡೆದು ಚಿಲ್ಲರೆ ಸಾಲಗಳನ್ನು ತೀರಿಸಿದರು.

ವೆಂಕಟೇಶಯ್ಯನವರಿಗೆ ಮೂವರು ಮಕ್ಕಳು. ಒಬ್ಬಾಕೆ ಹೆಣ್ಣು, ಇಬ್ಬರು ಗಂಡು. ಗಂಡು ಮಕ್ಕಳಲ್ಲಿ ಹಿರಿಯವನಾದ ಸೀತಾರಾಮ ಮತ್ತು ಹೆಣ್ಣು ಮಗಳು ಕೃಷ್ಣವೇಣಿ ತಾಯಿಯ ತವರು ಮನೆಯಲ್ಲಿಯೇ ಬೆಳೆದು ದೊಡ್ಡವರಾದರು. ಆ ಸೋದರ ಮಾವಂದಿರಲ್ಲಿ ಹಿರಿಯರಾದ ಭುಜಂಗಯ್ಯನವರು ಶ್ರೀಮಂತರು, ದೊಡ್ಡ ಕಾರುಬಾರಿ. ಹೀಗಾಗಿ ಅವರು ಸೀತಾರಾಮನಿಗೆ ಹೈಸ್ಕೂಲು ವಿದ್ಯಾಭ್ಯಾಸಕ್ಕೆ ನೇರವಾಗಿ ಉಪಾಧ್ಯಾಯ ತರಬೇತಿಯನ್ನೂ ಕೊಡಿಸಿದ್ದರು. ಸೀತಾರಾಮ ದೂರದ ಊರಿನ ಶಾಲೆಯಲ್ಲಿ ಉಪಾಧ್ಯಾಯನಾಗಿದ್ದುಕೊಂಡು ತನ್ನ ಸಂಸಾರವನ್ನು ಅಲ್ಲೇ ಹೂಡಿದ್ದ. ಕೃಷ್ಣವೇಣಿಯನ್ನು ಭುಜಂಗಯ್ಯ ಮತ್ತು ಅವರ ತಮ್ಮ ಶ್ಯಾನುಭಾಗ ಶೇಷಣ್ಣನವರು ಕೂಡಿಯೇ ಬಹಳ ವಿಜೃಂಭಣೆಯಿಂದ ಒಳ್ಳೆಯ ಶ್ರೀಮಂತ ಮನೆತನದ ಯುವಕನಿಗೆ ಮದುವೆ ಮಾಡಿಕೊಟ್ಟಿದ್ದರು. ವೆಂಕಟೇಶಯ್ಯನವರ ಎರಡನೇ ಮಗ ಗೋಪಾಲ ಮನೆಯಲ್ಲಿಯೇ ಇದ್ದು ನಾಲ್ಕನೇ ತರಗತಿಯ ತನಕ ಶಾಲೆಗೆ ಹೋಗಿ ವಿದ್ಯಾಭ್ಯಾಸವನ್ನು ನಿಲ್ಲಿಸಿದ. ಯಾವ ಲಂಗು ಲಗಾಮೂ ಇಲ್ಲದೆ ತಿರುಕುಳಿಯಾದ. ಆದರೆ ಅವನಿಗೆ ಕ್ರಮೇಣ ಬಯಲಾಟದ ಭಾಗವತಿಕೆಯಲ್ಲಿ ಆಸಕ್ತಿಯುಂಟಾಯಿತು. ಇದನ್ನು ತಿಳಿದ

ಶೇಷಣ್ಣನವರು ಅವನನ್ನು ಪ್ರಸಿದ್ಧ ಭಾಗವತರಾದ ನೇರೆಂಕಿ ನಾರಾಯಣ ಭಾಗವತರಲ್ಲಿ ಕರೆದುಕೊಂಡು ಹೋಗಿ ಭಾಗವತಿಕೆ ಕಲಿಯಲು ಬಿಟ್ಟರು.

ಸೀತಾರಾಮ ತಂದೆಯಲ್ಲಿ ಜಗಳ ಕಾಯುತ್ತಿದ್ದ. ತನಗೆ ಪಿತ್ರಾರ್ಜಿತ ಸೊತ್ತಿನಿಂದ ಏನೂ ಸಿಗಲಿಲ್ಲ, ತಂದೆ ದುಂದುಗಾರಿಕೆ ಮಾಡಿ ಆಸ್ತಿ ಕಳೆದುಕೊಳ್ಳಲು ತಯಾರಾಗಿದ್ದಾರೆ ಎಂಬುದು ಆತನ ಆಕ್ರೋಶ. ಗೋಪಾಲ ನಾರಾಯಣ ಭಾಗವತರೊಡನೆ ಆಟದ ಮೇಳದ ಸಂಗೀತಗಾರನಾಗಿ ತಿರುಗಾಟ ಮಾಡಲು ಹೊರಟ. ಮನೆಯಲ್ಲಿ ವೆಂಕಟೇಶಯ್ಯ ಮತ್ತು ಅವರ ಹೆಂಡತಿ ವೆಂಕಮ್ಮ ಇಬ್ಬರೇ ಇದ್ದರೂ ನರಸಿಂಹ ರೈಗಳಿಗೆ ಕೊಡಬೇಕಾದ ಸಾಲದ ಬಡ್ಡಿ ಎರಡು ವರ್ಷದಿಂದ ಬಾಕಿಯಾಗಿತ್ತು. ಮನೆ ಒಂದು ಧರ್ಮಛತ್ರದಂತಾಗಿ ದಿನ ನಿತ್ಯದ ಖರ್ಚಿಗೆ ತತ್ವಾರವಾಗಿ ವೆಂಕಮ್ಮನವರು ಗಂಡನಲ್ಲಿ ಕಷ್ಟವನ್ನು ಹೇಳ ಹೊರಟಾಗ ಮಾತು ಮುಗಿಯುವುದು ಜಗಳದಲ್ಲಿಯೇ. ಜಗಳದಿಂದ ಕಾಸು ಕೈಗೆ ಬರುತ್ತದೆಯೆ?

ವೆಂಕಟೇಶಯ್ಯನವರಿಗೆ ಚಿಂತೆ ಅಡಗಿ ಹೋಯಿತು. ತನ್ನ ಸಂಕಷ್ಟಗಳಿಗೆ ಗ್ರಹಗತಿಗಳೇ ಕಾರಣವಾಗಿರಬಹುದೇನೋ ಎಂಬ ಸಂಶಯ ಬಂದು ಒಂದು ದಿನ ಚಾವಡಿಯ ಗೋಡೆ ಕಪಾಟಿನಲ್ಲಿದ್ದ ಜಾತಕದ ಗಂಟನ್ನು ಹೊರ ತೆಗೆದು ತನ್ನ ಜಾತಕದ ಧೂಳನ್ನು ಕೊಡಹಿದರು. ಅವರ ಜಾತಕ ಇದ್ದದ್ದು ಓಲೆಗರಿಯಲ್ಲಿ, ತುಳು ಬರಹದಲ್ಲಿ. ವೆಂಕಟೇಶಯ್ಯನವರಿಗೆ ತುಳು ಲಿಪಿಯ ಪರಿಚಯವಿಲ್ಲದ್ದರಿಂದ, ಅದನ್ನು ತಿಳಿದವರೊಬ್ಬರಿಂದ ಕಾಗದದಲ್ಲಿ ಕನ್ನಡದ ಪ್ರತಿಯೊಂದನ್ನು ಮಾಡಿಸಿ ಇಟ್ಟಿದ್ದರು. ಅಲ್ಪಸ್ವಲ್ಪ ಜ್ಯೋತಿಷ್ಯ ಶಾಸ್ತ್ರದ ಪರಿಚಯವಿದ್ದ ಅವರು ಕಾಗದದ ಪ್ರತಿಯನ್ನು ಬಿಡಿಸಿದರು. ಅದರಲ್ಲಿ ಜಾತಕದ ಅರುವತ್ತೈದನೇ ವರುಷಕ್ಕೆ ಕುಜರಾಹು ಸಂಧಿ ಇದೆ. ಅತ್ಯಗತ್ಯವಾಗಿ ಸಂಧಿ ಶಾಂತಿಯನ್ನು ಮಾಡಿಸಬೇಕೆಂದು ಬರೆದಿತ್ತು. ವೆಂಕಟೇಶಯ್ಯನವರು ಆ ವರುಷದ ಪಂಚಾಂಗವನ್ನು ತೆರೆದು ಕುಜರಾಹು ಸಂಧಿಯ ದಿನಾಂಕವನ್ನು ಗೊತ್ತು ಮಾಡಿಕೊಳ್ಳಲು ಪ್ರಯತ್ನಿಸಿದರು. ಜಾತಕದಲ್ಲಿ ಶಕವರುಷ, ಮೇಷಾದಿ ಮಾಸಗಳಲ್ಲಿ ಕಾಲಗಣನೆ ಇದ್ದ ಕಾರಣ ಇದನ್ನು ಕರಾರುವಕ್ಕಾಗಿ ತಾರೀಕಿಗೆ ಹೊಂದಿಕೊಳ್ಳಲು ಅವರಿಂದ ಸಾಧ್ಯವಾಗಲಿಲ್ಲ. ಕಡೆಗೆ ಆ ಜಾತಕವನ್ನು ಪುಟ್ಟಣ್ಣಯ್ಯ ಜೋಯಿಸರಲ್ಲಿ ತೋರಿಸುವ ಎಂದು ಕೊಂಡು ಅದನ್ನು ಮಾತ್ರ ಬೇರೆ ಇಟ್ಟು ಉಳಿದವುಗಳನ್ನು ಗಂಟು ಕಟ್ಟಿ ಕಪಾಟಿನಲ್ಲಿಟ್ಟರು.

ಮರು ದಿವಸ ಬೆಳಗ್ಗೆ ಬೇಗ ಎದ್ದು ಸ್ನಾನ, ಜಪ, ಫಲಾಹಾರಾದಿಗಳನ್ನು ತೀರಿಸಿ ಜೋಯಿಸರಲ್ಲಿಗೆ ಹೊರಟರು. ಐದು ಮೈಲು ನಡೆದು ಪುಟ್ಟಣ್ಣಯ್ಯನವರಲ್ಲಿಗೆ ಮುಟ್ಟಿದಾಗ ಆಗಲೇ ಅಲ್ಲಿ ಎರಡು ಮೂರು ಜನರು ಪಂಚಾಂಗ ಇಡಿಸಲು ಬಂದವರಿದ್ದರು. ಅವರ ಕೆಲಸ ಮುಗಿದಾದ ಮೇಲೆ ವೆಂಕಟೇಶಯ್ಯನವರು ಜಾತಕದ ಕಟ್ಟನ್ನು ಜೋಯಿಸರ ಕೈಯಲ್ಲಿಟ್ಟರು. ಪುಟ್ಟಣ್ಣಯ್ಯನವರು ಜಾತಕವನ್ನು ಕೂಲಂಕುಷವಾಗಿ ಪರಿಶೀಲಿಸಿ, ಗಣಿತ ಲೆಕ್ಕಾಚಾರವನ್ನೂ ಮಾಡಿ ಅರ್ಧ ಗಂಟೆ ಕಳೆದ ಮೇಲೆ ಹೇಳಿದರು. ಈ ಸಲದ ದೀಪಾವಳಿ ಕಳೆದು ವೈಕುಂಠ ಚತುರ್ದಶಿಯ ದಿವಸ ಕುಜದೆಸೆಯ ಚಂದ್ರ ಭುಕ್ತಿ ಮುಗಿದು ರಾಹುದಶೆ ಪ್ರಾರಂಭವಾಗುತ್ತದೆ. ದಶಾ ಪ್ರಾರಂಭ ಭುಕ್ತಿಗಳ ಲೆಕ್ಕಾಚಾರವನ್ನೆಲ್ಲ ನಾವು ಸಾವನ ವರುಷ

ಪ್ರಕಾರ ಲೆಕ್ಕ ಹಾಕುವುದು. ಅದು ಶಾಸ್ತ್ರಪ್ರಮಾಣ. ಸಾವನ ವರುಷಕ್ಕೆ ಮುನ್ನೂರ ಅರವತ್ತೇ ದಿನಗಳು. ಕ್ರಿಶ್ಚಿಯನ್ ಗಣನೆಯಂತೆ ಮುನ್ನೂರ ಅರವತ್ತೈದು ದಿನ ಎಂಬಿತ್ಯಾದಿ ಲೆಕ್ಕ ಅಲ್ಲ. ರಾಹು ದೆಸೆಗೆ ಪ್ರಾರಂಭವಲ್ಲಿ ರಾಹುಭುಕ್ತಿ ಎರಡು ವರುಷ ಎಂಟು ತಿಂಗಳು ಎರಡು ದಿವಸದ ತನಕ ಇದೆ. ನಿಮ್ಮ ಜಾತಕದಲ್ಲಿ ಚಂದ್ರನು ಅಷ್ಟಮದಲ್ಲಿದ್ದಾನೆ. ಅಲ್ಲಿಯೇ ಶನಿಯೂ ಇದ್ದಾನೆ, ಅಷ್ಟಮ ಸ್ಥಾನ ಮೃತ್ಯು ಸ್ಥಾನ. ಆದುದರಿಂದ ಮೊನ್ನೆ ಚಂದ್ರಭುಕ್ತಿ ಆರಂಭವಾದ ಮೇಲೆ ನಿಮಗೆ ಕಷ್ಟ ಪರಂಪರೆ ಹೆಚ್ಚಾಗಿದೆ. ಚಂದ್ರ ಮನಸ್ಸಿಗೆ ಕಾರಣವಾದ ಗ್ರಹವಾದುದರಿಂದ ನಿಮಗೆ ಈಗ ಮನಸ್ಸಿಗೆ ಸಮೃದ್ಧಿ ಇಲ್ಲ. ಈ ದೀಪಾವಳಿ ಕಳೆದು ಬರುವ ವೈಕುಂಠ ಚತುರ್ದಶಿಗೆ ಮೊದಲು ಕುಜರಾಹು ಸಂಧಿಗೆ ಜನ್ಮ ನಕ್ಷತ್ರದಂದು ಶಾಂತಿ ಮಾಡಿಸಿ. ಒಂದೆಡೆಯಲ್ಲಿ ನಿಮಗೆ ಪತನ ಭಯವಿದೆ. ದೀಪಾವಳಿಗೆ ಮುಂಚೆ ಸುಮಾರು ಒಂದು ತಿಂಗಳ ಒಳಗೆ ಬಿದ್ದು ಬಿಡುವ ಅಪಾಯವುಂಟು. ಶರೀರಕ್ಕೆ ಪೆಟ್ಟಾಗಿ ರಕ್ತ ಕಾಣಿಸಿಕೊಳ್ಳುವ ಚಿಹ್ನೆ ಕಾಣುತ್ತದೆ. ತುಂಬ ಎಚ್ಚರಿಕೆಯಿಂದ ಇರಿ.

ಜೋಯಿಸರಲ್ಲಿಂದ ಬಂದು ಒಂದು ವಾರದಲ್ಲಿ ವೆಂಕಟೇಶಯ್ಯನವರ ಬಂಧುಗಳ ಮನೆಯಲ್ಲಿ ನಡೆದ ತ್ರಿಕಾಲ ಪೂಜೆಯಲ್ಲಿ ಪುರೋಹಿತರಾಗಿದ್ದ ಪದ್ಮನಾಭ ಶಾಸ್ತ್ರಿಗಳವರಲ್ಲಿ ಕುಜರಾಹು ಸಂಧಿಯ ಶಾಂತಿಯ ಬಗ್ಗೆ ವಿವರ ಕೇಳಿದರು. ಶಾಸ್ತ್ರಿಯವರು ಮೃತ್ಯುಂಜಯ ಹೋಮ, ಧನ್ವಂತರಿ ಹೋಮ, ಆ ದಾನ, ಈ ದಾನ ಎನ್ನುತ್ತಾ ಅದಕ್ಕೆ ಬೇಕಾದ ಸಾಮಾಗ್ರಿಗಳು, ಮುಂತಾದ ಪಟ್ಟಿಯನ್ನು ಮುಂದಿಟ್ಟಾಗ ಇದಕ್ಕೆ ಬೇಕಾದಷ್ಟು ಹಣ ಎಲ್ಲಿಂದ ಒದಗಿಸುವುದು? ಎಂಬ ಪ್ರಶ್ನೆ ದೈತ್ಯಾಕಾರವಾಗಿ ವೆಂಕಟೇಶಯ್ಯನವರ ಎದಿರು ನಿಂತಿತು.

ಒಂದು ದಿನ ರಾತ್ರಿ ವೆಂಕಟೇಶಯ್ಯನವರು ನಿದ್ದೆ ಬಾರದೆ ಹೊರಳಾಡುತ್ತಿದ್ದಾಗ ಅವರಿಗೆ ತಮ್ಮ ಹೆಂಡತಿಯ ತಮ್ಮಂದಿರು ನೆನಪಾಯಿತು. ಹಿಂದೆ ಭುಜಂಗಯ್ಯನವರೂ ಶೇಷಣ್ಣನೂ ಒಟ್ಟಿಗೆ ಇದ್ದಾಗ ತನ್ನ ಮೊದಲ ಮಗ ಸೀತಾರಾಮನಿಗೆ ವಿದ್ಯೆ ಕಲಿಸಿ ಉದ್ಯೋಗಕ್ಕೆ ಸೇರಿಸಿದ್ದರು. ಮಗಳು ಕೃಷ್ಣವೇಣಿಯನ್ನೂ ಒಳ್ಳೆಯ ಗಡದ್ದಿನಿಂದ ಮದುವೆ ಮಾಡಿಕೊಟ್ಟಿದ್ದರು. ಆದರೆ ಈಗ ನಾಲ್ಕು ವರುಷಗಳ ಹಿಂದೆ ಅಣ್ಣ ತಮ್ಮಂದಿರು ಆಸ್ತಿಯನ್ನು ಪಾಲು ಮಾಡಿಕೊಂಡು ಬೇರೆ ಬೇರೆಯಾಗಿದ್ದಾರೆ. ಆದುದರಿಂದ ಇವರಲ್ಲಿ ಈಗ ಹಣ ಕೇಳಿದರೆ ಸಿಕ್ಕೀತೆ? ಎಂದೆಲ್ಲ ಮನಸ್ಸಿನಲ್ಲೆ ಪ್ರಶ್ನೆಗಳ ಮಾಲೆ ಹೆಣೆಯ ತೊಡಗಿದರು. ಕಡೆಗೆ ಏನಾದರೂ ಆಗಲಿ 'ಕೇಳಿನೋಡುವ' ಎಂದು ನಿಶ್ಚೈಸಿದರು.

ಮರುದಿನ ಬೆಳಗ್ಗೆ ಭುಜಂಗಯ್ಯನವರ ಮನೆಗೆ ಸವಾರಿ ಬಿಟ್ಟರು. ಭುಜಂಗಯ್ಯನವರು ಶ್ರೀಮಂತರಾಗಿದ್ದರೂ ತುಂಬ ಖರ್ಚುಗಾರ. ಕೋರ್ಟು ಕಚೇರಿ ಎಂದು ದಿನನಿತ್ಯವೂ ಅಲೆಯುತ್ತಿರುವವರು. ಅವರಿಗೆ ಎಷ್ಟು ವ್ಯವಹಾರ ಇದೆ ಎಂಬುದು ಅವರಿಗೆ ಮಾತ್ರ ಗೊತ್ತು. ಯಾರಾದರೂ ತನಗೆ ಅನ್ಯಾಯವಾಗಿದೆ ಎಂದು ಅವರ ಕಾಲು ಹಿಡಿದರೆ ಭುಜಂಗಯ್ಯನವರು ಅವನ ಕಡೆಯಿಂದ ಹೋರಾಟಕ್ಕೆ ಇಳಿದೇ ಬಿಡುತ್ತಿದ್ದರು. ಅವರ ಹಗೆಗಳು ಯಾರೆ ಇರಲಿ ಭುಜಂಗ ಎಂಬ ತನ್ನ ಹೆಸರಿಗೆ ತಕ್ಕಂತೆ (ಸರ್ಪದ ಹಾಗೆ) ಹಗೆ ಸಾಧಿಸಿಯೇ ಬಿಡುವವರು.

ಭುಜಂಗಯ್ಯನವರಿಗೆ ಹತ್ತು ಮೂವತ್ತು ಹರಿಜನರ ಒಕ್ಕಲು. ಅವರೆಲ್ಲ ಬೇಸಾಯದ ವೃತ್ತಿಗೆ ನೆರವಾಗುವ ಕೂಲಿಯಾಳುಗಳು. ಅವರ ಗುಡಿಸಲುಗಳಿಗೆ ಕೆಲವು ದಿನಗಳಿಂದ ಒಬ್ಬ ಕ್ರೈಸ್ತ ಪಾದ್ರಿ ಆಗಾಗ ಭೇಟಿಕೊಟ್ಟು ಖಾಯಿಲೆಗೆ ಔಷಧ ಕೊಡುತ್ತೇನೆ, ಮಕ್ಕಳಿಗೆ ಓದು ಬರಹ ಕಲಿಸುತ್ತೇನೆ ಎಂದು ಹೇಳುತ್ತಾ ಹುರಿಯಕ್ಕಿ ಎಳ್ಳಿನ ಉಂಡೆ ಮುಂತಾದ ತಿಂಡಿ ತಿನಿಸುಗಳನ್ನು ಕೊಟ್ಟು ಅವರೆಲ್ಲರ ವಿಶ್ವಾಸ ಗಳಿಸಲು ಹೊರಟಿದ್ದ. ಕ್ರಮೇಣ ಏಸು ಒಬ್ಬನೇ ದೇವರು ಅವನನ್ನು ನಂಬಿದವರಿಗೆ ಮಾತ್ರ ಆರೋಗ್ಯ, ಹಣ, ಪರಲೋಕ ಸಿಗುತ್ತದೆ. ಏಸುವನ್ನು ನಂಬದವರು ಪಾಪಿಗಳಾಗಿ ನರಕಕ್ಕೆ ಹೋಗುತ್ತಾರೆ, ಎಂಬ ಬೋಧನೆಗಳನ್ನು ಕೊಡಲು ತೊಡಗಿದ. ಇದು ಮತಾಂತರದ ಹುನ್ನಾರು ಎಂದು ಗೊತ್ತಾಗಿ ಭುಜಂಗಯ್ಯನವರು ಒಂದು ದಿವಸ ಪಾದ್ರಿ ಹರಿಜನ ಕೇರಿಗೆ ಬಂದಾಗ ನಾಲ್ಕು ತರುಣರನ್ನು ಕಳುಹಿಸಿ ಅವನನ್ನು ಓಡಿಸಲು ಹೇಳಿದರು. ಹೆದರಿ ಓಡಿ ಹೋದ ಪಾದ್ರಿ ಬ್ರಿಟೀಷ್ ಸರ್ಕಾರಕ್ಕೆ ಹತ್ತಿರದವನಾದುದರಿಂದ ತನ್ನ ಮೇಲೆ ಪೋಲೀಸರಿಗೆ ದೂರು ಕೊಡಬಹುದೆಂಬ ಯೋಚನೆಯಿಂದ, ಪಾದ್ರಿ ಹರಿಜನ ಯುವತಿಯ ಮೇಲೆ ಕೈ ಹಾಕಲು ಬಂದ ಎಂಬ ದೂರನ್ನು ಕೂಡಲೇ ಪೋಲೀಸರಿಗೆ ಸಲ್ಲಿಸಿ ಬಿಟ್ಟರು.

ಪಾದ್ರಿಯ ದೂರು ಸ್ಟೇಷನ್ನಿಗೆ ಮುಟ್ಟುವಾಗ ಅಲ್ಲಿ ಹರಿಜನ ಹೆಂಗಸಿನ ಅರ್ಜಿ ಮೊದಲೇ ಬಂದಿದ್ದದ್ದು ಗೊತ್ತಾಯಿತು. ಭುಜಂಗಯ್ಯನವರನ್ನು ಚೆನ್ನಾಗಿ ಬಲ್ಲ ಪೋಲೀಸ್ ಇನ್‌ಸ್ಪೆಕ್ಟರರು ಪಾದ್ರಿಯಲ್ಲಿ ನೀವು ಭುಜಂಗಯ್ಯನವರೊಡನೆ ರಾಜಿ ಮಾಡಿಕೊಳ್ಳಿ. ಹಟಕ್ಕಿಳಿದರೆ ಅವರು ನಾಗರಹಾವೇ ಸರಿ ಎಂದು ಹಿತವಚನ ಹೇಳಿದ್ದರಿಂದ ಕೇಸು ರಾಜಿಯಾಗುವ ಹಂತಕ್ಕೆ ಬಂದಿತ್ತು. ಈ ಸಂದರ್ಭದಲ್ಲಿ ವೆಂಕಟೇಶಯ್ಯನವರು ಹಣಕ್ಕಾಗಿ ಭುಜಂಗಯ್ಯನವರಲ್ಲಿಗೆ ಹೋದದ್ದು.

ಎರಡು ದಿವಸ ಕುಳಿತರೂ ವೆಂಕಟೇಶಯ್ಯನವರಿಗೆ ಭುಜಂಗಯ್ಯನವರೊಡನೆ ಸರಿಯಾಗಿ ಮಾತಾಡಲು ಸಂದರ್ಭವೇ ಸಿಗಲಿಲ್ಲ. ಅವರ ಗಡಿಬಿಡಿಯನ್ನು ನೋಡಿ ಮೂರನೇ ದಿನ ಇಲ್ಲಿ ಹಣದ ಸುದ್ದಿ ಎತ್ತುವುದೇ ಬೇಡ ಎಂದು ಶೇಷಣ್ಣ ಭಾವನವರಲ್ಲಿಗೆ ಹೋದರು. ಅಂದೇ ರಾತ್ರಿ ಊಟವಾದ ಮೇಲೆ ಸಂಧಿ ಶಾಂತಿಯ ಪ್ರಸ್ತಾವ ಮಾಡಿದರು. ಶೇಷಣ್ಣನವರು ವೆಂಕಟೇಶಯ್ಯನವರ ಬಾಯಿಂದ ಆದ್ಯಂತವಾಗಿ ವಿಷಯ ತಿಳಿದುಕೊಂಡ ಮೇಲೆ ನಿಧಾನವಾಗಿ "ಭಾವಯ್ಯಾ, ನೀವು ನರಸಿಂಹ ರೈಗಳಿಗೆ ಕೊಡುವ ಬಡ್ಡಿ ಬಾಕಿ ಮಡಿಕೊಂಡ ಕಾರಣ ಅವರು ಅಸಲು ಬಡ್ಡಿಗಾಗಿ ವ್ಯಾಜ್ಯ ದಾಖಲು ಮಾಡಿದ್ದಾರೆ ಎಂದೂ ಹೇಳುತ್ತೀರಿ. ಇತ್ತ ದೊಡ್ಡ ಮಟ್ಟಿನ ಖರ್ಚಿನ ಸಂಧಿ ಶಾಂತಿಯ ಬಗೆಗೂ ಹೊರಟಿದ್ದೀರಿ. ರೈಗಳ ರಾಜ್ಯದಲ್ಲಿ ಕೋರ್ಟು ಡಿಕ್ರಿಯಾಗಿ ಆಸ್ತಿ ಏಲಂ ಆದೀತು. ಆಗ ಸಂದಿಯೂ ಇಲ್ಲ ಶಾಂತಿಯೂ ಇಲ್ಲ. ನೀವು ಈ ಜೋಯಿಸರ, ಪೌರೋಹಿತ್ಯದ ಮಾತು ಕೇಳಿ ಸುಮ್ಮನೆ ತಲೆ ಕೆಡಿಸಿಕೊಂಡಿದ್ದೀರಿ. ಅವರು ಹೇಳುವುದು ಸತ್ಯವೆ? ನನ್ನ ಅನುಭವ ಕೇಳಿ. ಮೂರು ಮದುವೆಯಾದ ಜೋಯಿಸರುಗಳಿದ್ದಾರೆ; ಒಬ್ಬಾಕೆ ಸತ್ತ ಮೇಲೆ ಇನ್ನೊಬ್ಬಳನ್ನು. ಅವರ ಜಾತಕಗಳನ್ನು ನೋಡಿದಾಗ ಆ ಹುಡುಗಿಯರು ಅಲ್ಪಾಯುಷಿಗಳೆಂದು ಜೋಯಿಸರಿಗೆ

ತಿಳಿಯಲಿಲ್ಲವೆ? ಜೋಯಿಸರ ಮಗಳು ವಿಧವೆಯಾವದ್ದಿಲ್ಲವೆ? ಇತರರಿಗೆ ಸಂಧಿ ಶಾಂತಿ ಹೇಳುವವರು ತಮ್ಮ ಜಾತಕದಲ್ಲಿ ಅಥವಾ ತಮ್ಮ ಹೆಂಡತಿ ಮಕ್ಕಳ ಜಾತಕದಲ್ಲಿ ಸಂಧಿಗಳಿದ್ದರೆ ಶಾಂತಿ ಮಾಡಿಸುತ್ತಾರೆಯೆ? ಪುರೋಹಿತರುಗಳೂ ಅಷ್ಟೆ ಆ ಹೋಮ ಈ ಹೋಮ ಅದು ದಾನ ಇದು ದಾನ ಎಂದು ಹಣ ಖರ್ಚು ಮಾಡಿಸಿ ದೊಡ್ಡ ಗಂಟು ಕಟ್ಟುತ್ತಾರೆ. ಇವರು ಕರ್ಮಾಂಗಗಳನ್ನು ಸರಿಯಾಗಿ ಮಾಡುತ್ತಾರೆಯೆ? ನೀವು ಹುಚ್ಚು ಕಟ್ಟಬೇಡಿ. ಸಾಲ ಮಾಡಿ ----- ದೇವಸ್ಥಾನದಲ್ಲಿ ತಿಗಳೋಡಿ ತಮ್ಮಣ್ಣ ತಂತ್ರಿಗಳು ವೈಭವದಿಂದ ಶುಕ್ರಾರ್ತ ಸಂಧಿ ಶಾಂತಿಯನ್ನು ಮಾಡಿದರು. ಮೂರು ತಿಂಗಳಾಗಬೇಕಾದರೆ ಅರಿಪಾಡಿತ್ತಾಯರು ಪ್ರಾಣ ಬಿಟ್ಟರು. ನಿಮಗೆ ಎಷ್ಟು ಉದಾಹರಣೆ ಬೇಕು? ಕುಜರಾಹುಗಳಿಂದ ನಿಮಗೆ ಕಂಟಕ ಇದೆ ಎಂಬ ನಂಬಿಕೆ ಇದ್ದರೆ ನೀವು ಕುಕ್ಕೆ ಸುಬ್ರಹ್ಮಣ್ಯಕ್ಕೆ ಹೋಗಿ ಪ್ರಾರ್ಥನೆ ಮಾಡಿ ಯಥಾಸಾಧ್ಯ ಸೇವೆ ಮಾಡಿಸಿ, ಪ್ರಸಾದ ತೆಗೆದುಕೊಂಡು ಬನ್ನಿ. ಕುಜರಾಹುಗಳ ಅಧಿ ದೇವತೆ ಸುಬ್ರಹ್ಮಣ್ಯ. ಹೋಮದ ಸುದ್ದಿ ಬಿಡಿ ಧೈರ್ಯವಾಗಿರಿ. ಎಂದು ಪುಟ್ಟ ಉಪನ್ಯಾಸವನ್ನೇ ಬಿಗಿದರು.

ವೆಂಕಟೇಶಯ್ಯನವರಿಗೆ ಮುಂದೆ ಉಳಿದದ್ದು ಒಂದೇ ದಾರಿ, ಮಗಳ ಮನೆಗೆ ಹೋಗಿ ಮಾಡುವ ಪ್ರಯತ್ನ. ಶೇಷಣ್ಣನವರಲ್ಲಿಂದ ನೇರ ಅಳಿಯ ಅನಂತರಾಯರ ಮನೆಗೆ ಹೋದರು. ಅನಂತರಾಯರು ಶ್ರೀಮಂತರು, ದಾನಧರ್ಮ, ಅತಿಥಿ ಸತ್ಕಾರ ಮುಂತಾದ ವಿಷಯಗಳಲ್ಲಿ ಜಿಪುಣರಲ್ಲ. ಆದರೆ ಅವರು ತುಂಬ ಶಿಸ್ತಿನ ಮನುಷ್ಯ. ಯಾರೇ ಆಗಲಿ ಅವರ ಯೋಗ್ಯತೆ ಎಷ್ಟು? ಎಂಬುದನ್ನು ಹತ್ತು ನಿಮಿಷದ ಮಾತು ಕತೆಯಲ್ಲಿ ನಿರ್ಣಯಿಸಬಲ್ಲ ಇಂಗಿತಜ್ಞರು. ಐದು ರೂಪಾಯಿ ಕೊಡುವುದಿದ್ದರೂ ಇದು ಸದ್ವಿನಿಯೋಗಕ್ಕೆ ಹೋಗುತ್ತಿದೆಯೆ? ಎಂದು ಲೆಕ್ಕಾಚಾರ ಹಾಕುವವರು. ಬಂದವರಲ್ಲಿ ಮಾತು ಬೆಳೆಸುವುದಿದ್ದರೂ ಅದಕ್ಕೆ ಅರ್ಥ ಇರಬೇಕು. ಬರೇ ಹಾಳು ಹರಟೆಗೆ, ಇನ್ನೊಬ್ಬರ ಸಂಸಾರದ ಹುಳುಕುಗಳ ಬಗ್ಗೆ ಎಡೆ ಇಲ್ಲ. ಅವರನ್ನು ಮೊತ್ತ ಮೊದಲಾಗಿ ನೋಡಿದವರು ಆನಂದರಾಯರ ಗಂಭೀರವಾದ ಮುಖಭಾವ, ಪ್ರತಿಯೊಂದು ಮಾತನ್ನು ತೂಗಿ ತೂಗಿ ಆಡುವ ಕ್ರಮ, ಇವುಗಳಿಗೆ ಸೋತು ಬಿಡದೆ ಇಲ್ಲ.

ವೆಂಕಟೇಶಯ್ಯನವರು ಅಳಿಯನ ಮನೆಗೆ ಮುಟ್ಟಿದ್ದು ಕತ್ತಲಾಗುವ ಹೊತ್ತಿಗೆ. ತಾನು ಬಂದ ವಿಷಯ ನೇರವಾಗಿ ಅಳಿಯನಲ್ಲಿ ಹೇಳುವ ಧೈರ್ಯವಿಲ್ಲದೆ ಮರುದಿನ ಆನಂದರಾಯರು ಸ್ನಾನಕ್ಕೆ ಹೋದಾಗ ಮಗಳು ಕೃಷ್ಣವೇಣಿಯಲ್ಲಿ ಬಂದ ಕಾರ್ಯಾರ್ಥವನ್ನು ತಿಳಿಸಿದರು. ಕೃಷ್ಣವೇಣಿ ತುಂಬ ಸಾಧು ಸ್ವಭಾವದ ಹೆಂಗಸು. ಗಂಡನ ಮರ್ಜಿಯನ್ನು ಸಂಪೂರ್ಣ ತಿಳಿದವಳಾಗಿ ನೆರಳಿನಂತೆ ನಡೆಯುವ ವ್ಯಕ್ತಿ. ಅವಳು ಮಾತಾಡುವುದೂ ಹಾಗೆಯೇ, ತನ್ನ ಮಾತಿನಿಂದ ಯಾರಿಗಾದರೂ ನೋವಾದೀತೋ? ತಾನು ಆಡಿದ್ದು ಹೆಚ್ಚಾಯಿತೋ? ಎಂಬ ಎಚ್ಚರಿಕೆ ಸದಾ ಅವಳ ಮಾತುಕತೆಯ ಎಡೆಯಲ್ಲಿ ಇದ್ದೇ ಇರುತ್ತಿತ್ತು. ತಂದೆಯವರ ತಳಮಳ ಗೊತ್ತಾಗಿ ಆಕೆಯ ಕಣ್ಣಿನಿಂದ ನಾಲ್ಕು ಬಿಂದು ಕಣ್ಣೀರು ಉರುಳಿತು.

ರಾತ್ರಿ ಊಟವಾದ ಮೇಲೆ ಗಂಡ ಮಲಗುವ ಕೋಣೆಗಳ ಕಂಚಿನ ಗಿಂಡಿಯಲ್ಲಿ ಬಿಸಿಯಾದ ದನದ ಹಾಲನ್ನು ಕೊಂಡು ಹೋಗಿ ಇಡುವುದು ಕೃಷ್ಣವೇಣಿಯ ಮಾಮೂಲು

ಪದ್ಧತಿ. ಮನೆಗೆ ಯಾವುದಾದರೂ ಸಾಮಾನು ಬೇಕಾದರೆ ಮಕ್ಕಳಿಗೆ ಏನಾದರೂ ಬೇಕಿದ್ದರೆ ಗೃಹಕೃತ್ಯದ ಅಗತ್ಯಗಳ ಬಗ್ಗೆ ಗಂಡನಲ್ಲಿ ತಿಳಿಸಬೇಕಾಗಿ ಬಂದರೆ, ಈ ಸಂದರ್ಭದಲ್ಲಿ ಮಾತ್ರ ಅದು ಸಾಧ್ಯ. ಇನ್ನೊಂದು ರೀತಿಯಿಂದ ಹೇಳುವುದಿದ್ದರೆ ಅಂಥ ಮಾತುಗಳಿಗೆ ಅದು ಗೊತ್ತಾಗಿದ್ದ ಕಾಲ. ಆ ರಾತ್ರಿ ಕೃಷ್ಣವೇಣಿ ಗಂಡನಲ್ಲಿ ತನ್ನ ತಂದೆ ಬಂದ ಕಾರಣವನ್ನು ಬಹಳ ಎಚ್ಚರವಹಿಸಿ ತಿಳಿಸಿದಳು. ಗಂಡ ಏನಾದರೂ ಉತ್ತರ ಕೊಡುತ್ತಾರೋ ಎಂದು ತುಸು ಕಾದಳು. ಗಂಡ ಈ ವಿಷಯದಲ್ಲೂ ಈಗ ಏನೂ ಹೇಳುವುದಿಲ್ಲ ಎಂದು ಖಚಿತವಾದ ಮೇಲೆ ಅಲ್ಲಿಂದ ಹೊರಟಳು. ಮರು ದಿವಸವೂ ಆನಂದರಾಯರ ಉತ್ತರ ಸಿಗದ ಕಾರಣ ಆದರ ಮಾರನೆಯ ದಿನ ಮನೆಗೆ ಹೊರಡಲು ವೆಂಕಟೇಶಯ್ಯನವರು ಅಂಗಿ ಹಾಕಿದ್ದನ್ನು ನೋಡಿ ಆನಂದ ರಾಯರು ಹೆಂಡತಿಯನ್ನು ಕರೆದು ನೂರು ರೂಪಾಯಿ ಅವಳ ಕೈಯಲ್ಲಿಟ್ಟು ''ನಿನ್ನ ತಂದೆಗೆ ಕೊಡು'' ಎಂದು ಸೂಚಿಸಿದರು. ಹಣವನ್ನು ಒಳ ಕಿಸೆಯಲ್ಲಿಟ್ಟುಕೊಂಡು ವೆಂಕಟೇಶಯ್ಯನವರು ಸಪ್ಪೆ ಮುಖದಿಂದ ಭಾರವಾದ ಹೆಜ್ಜೆ ಹಾಕುತ್ತಾ ಮನೆಯ ದಾರಿ ಹಿಡಿದರು.

ದೀಪಾವಳಿ ಹತ್ತಿರವಾಗುತ್ತಾ ಬಂತು. ಅಳಿಯ ಕೊಟ್ಟ ಹಣ ಸಂಧಿ ಶಾಂತಿಗೆ ಏನೇನೂ ಸಾಲದು. ಒಂದು ತಿಂಗಳು ಶಾಂತಿ ಹೋಮದ ವ್ಯವಸ್ಥೆಗೇ ಬೇಕು. ಏನು ಮಾಡುವುದು? ವೆಂಕಟೇಶಯ್ಯನವರ ಚಿಂತೆ ದಿನದಿಂದ ದಿನಕ್ಕೆ ಬಲವಾಗುತ್ತಾ ಹೋಯಿತು. ಅದು ತನಕ ಪ್ರತಿ ಸೋಮವಾರ ದೇವಸ್ಥಾನಕ್ಕೆ ಹೋಗುತ್ತಿದ್ದವರು ಹೆಚ್ಚು ಕಡಮೆ ದಿನವೂ ಹೋಗ ತೊಡಗಿದರು. ಯಾವಾಗಲೂ ತೀರ್ಥ ಪ್ರಸಾದ ತೆಗೆದುಕೊಂಡ ಮೇಲೆ ಮೇಲ್‌ಶಾಂತಿಯ ದೇವಪೂಜೆತ್ತಾಯರು ಪರಿಚಾರಿಕ, ನಾರಾಯಣ ನಂಬೀಶ, ಪದಾರ್ಥಿ ಪಮ್ಮಚ್ಚ ಕೋಲುಗಾರ ಕೇಪು ಮುಂತಾದವರ ಹತ್ತಿರ ಲೋಕಾಭಿರಾಮವಾಗಿ ನಾಲ್ಕು ಮಾತು ಆಡಿಯೇ ಬರುತ್ತಿದ್ದವರು ಈಗ ತೀರ್ಥ ಪ್ರಸಾದ ಸ್ವೀಕರಿಸಿ ಗೋಪುರದ ಒಂದು ಬದಿಯಲ್ಲಿ ಮೌನವಾಗಿ ಕುಳಿತು ಎದ್ದು ಬರತೊಡಗಿದರು. ದಾರಿಯಲ್ಲಿಯೂ ಯಾರಾದರೂ ಮಾತನಾಡಿಸಿದರೆ ಚುಟುಕು ಉತ್ತರ ಅಷ್ಟೇ.

ಅಂತೂ ವೆಂಕಟೇಶಯ್ಯನವರಿಗೆ ಕುಜರಾಹು ಸಂಧಿ ಶಾಂತಿ ಮಾಡಿಸಲು ತನ್ನಿಂದ ಸಾಧ್ಯವಿಲ್ಲವೆಂದೇ ತೀರ್ಮಾನವಾಗಿ ಬಿಟ್ಟಿತು. ದೀಪಾವಳಿಗೆ ಒಂದು ವಾರ ಇದೆ ಎಂದಾಗ ಸಂಜೆ ದೇವಸ್ಥಾನಕ್ಕೆ ಹೋದವರು ಹೊತ್ತು ಮುಳುಗುವ ತನಕ ಅಲ್ಲೇ ಉಳಿದರು. ನಸುಗತ್ತಲೆಗೆ ಮನೆಗೆ ಬರುತ್ತಿರುವಾಗ ಏನನ್ನೋ ಎಡವಿ ಬಿದ್ದು ಬಿಟ್ಟರು. ಕಾಲು ಉಳುಕಿತು. ಮಂಡಿಗೆ ಗಾಯವಾಯಿತು. ರಕ್ತ ಹರಿಯಿತು. ಹೇಗೋ ಸಾವರಿಸಿಕೊಂಡು ಮನೆಗೆ ತಲುಪಿದರು. ಚಾಪೆ ಬಿಡಿಸಿ ಮಲಗಿದರು. ರಾತ್ರಿಯ ಊಟಕ್ಕೂ ಏಳಲಿಲ್ಲ.

ವೆಂಕಟೇಶಯ್ಯನವರಿಗೆ ಪುಟ್ಟಣ್ಣ ಜೋಯಿಸರು ಹೇಳಿದ ಪತನದ ನೆನಪಾಯಿತು. ಸಂಧಿ ದಿನಕ್ಕೆ ಮುಂಚೆ ಎಲ್ಲಿ ಯಾದರೂ ಬಿದ್ದು ಬಿಟ್ಟರೆ ಅಪಾಯ, ಅದು ಮೃತ್ಯು ಚಿಹ್ನೆ, ಎಚ್ಚರಿಕೆ ಎಂದಿದ್ದರು ಜೋಯಿಸರು. ಇನ್ನು ತನಗೆ ಮರಣ ಖಾತ್ರಿ. ಅದು ಖಂಡಿತ ವೈಕುಂಠ ಚತುರ್ದಶಿಯಂದು ಸಂಭವಿಸಿಯೇ ಬಿಡುತ್ತದೆ ಎಂಬ ವಿಚಾರದಲ್ಲಿ ವೆಂಕಟೇಶಯ್ಯನವರಿಗೆ

ಏನೂ ಸಂಶಯ ಉಳಿಯಲಿಲ್ಲ. ಇನ್ನೇನು ಮರಣ ಸಿದ್ಧತೆಯೊಂದೇ ತನಗೆ ಉಳಿದಿರುವ ದಾರಿ ಎಂದುಕೊಂಡರು.

ಎರಡು ದಿನ ಕಳೆದಾಗ ಶವ ಸಂಸ್ಕಾರಕ್ಕೆ ಬೇಕಾದ ಹೊಸ ಬಟ್ಟೆ, ಹೊಸ ಮಡಿಕೆ, ದರ್ಬೆ, ಎಳ್ಳು ಮುಂತಾದ ಸಾಮಾಗ್ರಿಗಳನ್ನು ಆಳುಗಳ ಮೂಲಕ ತರಿಸಿಕೊಂಡರು. ಕಟ್ಟಿಗೆ ದಾಸ್ತಾನು ಮಾಡಿಸಿದರು. ಮನೆಗೆ ಬಂದವರಲ್ಲೆಲ್ಲಾ ತಾನು ಇಂಥಾ ದಿನ ಸಾಯುತ್ತೇನೆ ಎಂದು ಹೇಳಲು ತೊಡಗಿದರು. ವಾರ್ತೆ ಕುಟುಂಬದವರಿಗೆ ಮುಟ್ಟಿತು. ಊರೆಲ್ಲ ಹರಡಿತು. --- ಹತ್ತಿರ ವೈಕುಂಠ ಚತುರ್ದಶಿಯಂದು ಬೆಳಗ್ಗೆ ಬನ್ನಿ, ಮಧ್ಯಾಹ್ನಕ್ಕೆ ಎಲ್ಲ ಮುಗಿಯುತ್ತದೆ' ಎಂದು ಹೇಳಲಾರಂಭಿಸಿದರು. ಕುಟುಂಬದವರ ಪೈಕಿ ಯಾರಾದರೂ ಬಂದರೆ ಎಲ್ಲ ಸಾಮಾಗ್ರಿ ಸಿದ್ಧಪಡಿಸಿದ್ದೇನೆ. ವೈಕುಂಠ ಚತುರ್ದಶಿ ದಿವಸ ನನ್ನನ್ನು ಬೇಗ ಬೂದಿ ಮಾಡಿ ಬಿಡಿ ಎಂದು ದುಂಬಾಲು ಬೀಳುತ್ತಿದ್ದರು.


ವೆಂಕಟೇಶಯ್ಯನವರ ಕುಟುಂಬದವರ ಪೈಕಿ ಕುಟುಂಬದ ಯಜಮಾನರಾಗಿದ್ದ ರಾಮಚಂದ್ರಯ್ಯನವರು ಮಾತ್ರ ವೆಂಕಟೇಶಯ್ಯನವರನ್ನು ನೋಡಲು ಬಂದಿರಲಿಲ್ಲ. ರಾಮಚಂದ್ರಯ್ಯನವರು ವೆಂಕಟೇಶಯ್ಯನವರ ಮನೆಯ ಮುಂದಿನ ದಾರಿಯಾಗಿಯೇ ತಮ್ಮ ಮನೆಗೆ ಹೋಗಿ ಬರಬೇಕು. ಆ ದಾರಿಯಾಗಿ ನಾಲ್ಕೈದು ಸಲ ಅವರು ಸಂಚಾರ ಮಾಡಿದ್ದರೂ ವೆಂಕಟೇಶನಿಗೆ ಅರೆ ಮರಳು ಎಂದು ಅವರು ಸುಮ್ಮನಿದ್ದರು.

ವೈಕುಂಠ ಚತುರ್ದಶಿಯ ಹಿಂದಿನ ದಿವಸ ರಾತ್ರಿ ವೆಂಕಟೇಶಯ್ಯ ನಿರಾಹಾರ. ಚಾಪೆ ಬಿಡಿಸಿ 'ಪಂಚಲಿಂಗೇಶ್ವರಾ' ಎಂದು ಮಲಗಿಕೊಂಡರು. ಮರುದಿನ ಬೆಳಗ್ಗೆ ಐದು ಗಂಟೆಗೇ ಎದ್ದು ಜಪತಪ ದೇವರ ಪೂಜಾದಿಗಳನ್ನು ತೀರಿಸಿದರು. ಶವ ಸಂಸ್ಕಾರಕ್ಕೆಂದು ತಂದಿರಿಸಿದ ಸಾಮಾಗ್ರಿಗಳನ್ನು ಚಾವಡಿಯ ಒಂದು ಬದಿಯಲ್ಲಿ ಎಲ್ಲರಿಗೂ ಕಾಣುವಂತೆ ಇಟ್ಟರು. ಕೆಲಸದಾಳನ್ನು ಕರೆದು ಚಟ್ಟಕ್ಕೆ ಬೇಕಾದ ಬಿದಿರನ್ನೂ, ನೀಳವಾದ ಎರಡು ಬಾಳೆ ಎಲೆ ಕುಡಿಗಳನ್ನೂ, ಅಂಗಳದ ಬದಿಯಲ್ಲಿಡುವಂತೆ ಹೇಳಿದರು. ಏಳು ಗಂಟೆಯ ಹೊತ್ತಿಗೆ ಚಾಪೆ ಬಿಡಿಸಿ ಕುಳಿತು ಎರಡು ಉದ್ಧರಣೆ ತುಳಸಿ ತೀರ್ಥವನ್ನು ಕುಡಿದು ಎರಡು ಮೂರು ಎಸಳು ದರ್ಬೆ ಹುಲ್ಲನ್ನು ಹುರಿ ಮಾಡಿ ಪಾದಗಳನ್ನು ಹತ್ತಿರವಿಟ್ಟು, ಎರಡು ಹೆಬ್ಬೆರಳುಗಳನ್ನೂ ಅದರಿಂದ ಬಿಗಿದರು. ಹಳೆಯ ಒಂದು ಪಂಚೆಯನ್ನು ಹೊದೆದು 'ಪಂಚಲಿಂಗೇಶ್ವರಾ' ಎಂದು ಗಟ್ಟಿಯಾಗಿ ಹೇಳಿ ಮಲಗಿಕೊಂಡರು. ಸುಮಾರು ಹತ್ತು ಗಂಟೆಯ ಹೊತ್ತಿಗೆ ಅವರ ಕುಟುಂಬದವರ ಪೈಕಿ ನಾಲ್ಕಾರು ಜನ ಬಂದರು, ನೆರೆ ಹೊರೆಯ ಕೆಲವರೂ ಬಂದರು. ವೆಂಕಮ್ಮನವರು ಚಾವಡಿಯ ಒಂದು ಮೂಲೆಯಲ್ಲಿ ತಲೆಗೆ ಕೈ ಇಟ್ಟುಕೊಂಡು ಕುಳಿತಿದ್ದರು. ಹೊತ್ತು ಮಧ್ಯಾಹ್ನಕ್ಕೆ ತಿರುಗಿತು. ಹೊದಿಕೆಯ ಒಳಗಿಂದ ವೆಂಕಟೇಶಯ್ಯನವರ ಉಸಿರಾಟ ನಡೆದೇ ಇತ್ತು. ಸೇರಿದ ಜನರೆಲ್ಲ ಅತ್ತಿತ್ತ ಅಂಗಳದಲ್ಲಿ ತಿರುಗಾಡುತ್ತಾ ತಮ್ಮ ತಮ್ಮೊಳಗೆ ಗುಂಪು ಗುಂಪಾಗಿ ಮಾತಾಡಿಕೊಳ್ಳುತ್ತಿದ್ದರು.

ಈ ಹೊತ್ತಿಗೆ ಎಲ್ಲಿಗೋ ಹೋಗಿದ್ದ ರಾಮಚಂದ್ರಯ್ಯನವರು ತಮ್ಮ ಮನೆಗೆ ಹೋಗುವವರು ಆ ದಾರಿಯಾಗಿ ಬಂದರು. ವೆಂಕಟೇಶಯ್ಯನ ಮನೆಯ ಅಂಗಳದಲ್ಲಿ ನಿಂತ


ಜನರನ್ನು ನೋಡಿ ಏನೋ ಸಂಭವಿಸಿರಬೇಕು ಎಂದು ಯೋಚಿಸಿ ಅಂಗಳಕ್ಕೆ ಬಂದರು. ಎದಿರು ಸಿಕ್ಕಿದ ಒಬ್ಬರಲ್ಲಿ ಏನು ಆಗಿದೆ ಎಂದು ಕೇಳಿ ತಿಳಿದುಕೊಂಡರು. ನೇರ ಚಾವಡಿಗೆ ನುಗ್ಗಿದವರೇ ವೆಂಕಟೇಶಯ್ಯನ ಹೊದಿಕೆಯನ್ನು ಎಳೆದು ಬಿಸಾಡಿದರು. ರಟ್ಟೆ ಹಿಡಿದು ಜಗ್ಗಿ ಏಳು, ಕುಜರಾಹು ಸಂಧಿ ಎಂದು ನೀನು ತಲೆ ಬಿಂಗ್ರಿ ಮಾಡಿಕೊಂಡದ್ದು ಸಾಕಾಗದೆ ಇವರೆಲ್ಲರಿಗೂ ಬಿಂಗ್ರಿ ಮಾಡಲು ಹೊರಟಿದ್ದೀ. ನೀನು ಇವತ್ತು ಸಾಯುವುದಿಲ್ಲ, ಮಾಡಿದ ಕರ್ಮ ಅದ್ದಲಿಕ್ಕೆ ಇನ್ನೂ ಬಾಕಿ ಇದೆ. ಹೊಯ್ದ ಎಣ್ಣೆ ಮುಗಿಯಲಿಲ್ಲ'' ಎಂದು ಗರ್ಜಿಸಿದರು. ಹತ್ತಿರ ಇದ್ದವರಲ್ಲಿ "ನೀವು ಹೋಗಿ ಒಂದು ಕೆಂಪಿರುವೆ ------- ಇವನು ಎದ್ದು ನಿಲ್ಲುವುದು ಮಾತ್ರವಲ್ಲ, ಕುಣಿಯಲೂ ತೊಡಗುತ್ತಾನೆ' ಎಂದರು. ಇಷ್ಟು ಮಾತು ರಾಮಚಂದ್ರಯ್ಯನವರು ಹೇಳಿದ್ದೇ ತಡ ವೆಂಕಟೇಶಯ್ಯನವರು ಎದ್ದು ಕುಳಿತು, ಕಾಲ ಹೆಬ್ಬೆರಳಿಗೆ ಬಿಗಿದಿದ್ದ ದರ್ಬೆ ಕಟ್ಟನ್ನು ಬಿಚ್ಚಿದರು. ನಿಂತು ಚಾಪೆ ಮಡಚಿದರು. ನೇರ ಹೋಗಿ ರಾಮಚಂದ್ರಯ್ಯನವರ ಕಾಲು ಹಿಡಿದರು.

ಇದಾಗಿ ಹನ್ನೆರಡು ವರುಷ ಕಳೆದ ಮೇಲೆ ಖಾಯಿಲೆಯಿಂದ ನರಳಿ, ಆಟಿ ತಿಂಗಳ ಅಮಾವಾಸ್ಯೆಯಂದು ಜಡಿಮಳೆ ಸುರಿಯುತ್ತಿರುವಾಗ ಮಧ್ಯರಾತ್ರಿ ಹೊತ್ತು ವೆಂಕಟೇಶಯ್ಯನವರು ನಿಜವಾಗಿ ವೈಕುಂಠವಾಸಿಗಳಾದರು.



ಕಾಲುವೆ ದೋಣಿ ಪ್ರಸಂಗ

- ವತ್ಸನ



ರಾಮೇಶ್ವರಕ್ಕೆ ಹೋದರೂ ಶನೇಶ್ವರ ಬಿಡಲಿಲ್ಲ ಅನ್ನೋಹಾಗೆ ಬೆಂಗಳೂರಿಗೆ ಬಂದರೆ ಇಲ್ಲೂ ಇರಬೇಕೆ ಚಳಿ, ಮಳೆ. ಮೊನ್ನೆ ಬೆಳಗ್ಗೆ ಊರು ಸೇರಿದಂದಿನಿಂದ ನನಗೋ ಬಿಡುವಿಲ್ಲದ ಕೆಲಸ. ಮೊಬೈಲ್ ಕನೆಕ್ಷನ್, ಕೇಬಲ್ಲು, ಹಾಲಿನೋನು, ಪೇಪರ್ ಇವುಗಳನ್ನು ಪುನರಾರಂಭಿಸುವ ಕೆಲಸದಿಂದ ಹಿಡಿದು ನಂಜನಗೂಡಿಗೆ ಫೋನ್ ಮಾಡಿ ಸರೋಜಮ್ಮನವರನ್ನು ಕರೆಸುವವರೆಗೂ ಎಲ್ಲ ಜವಾಬ್ದಾರಿಗಳೂ ಸಹಜವಾಗಿಯೇ ನನ್ನ ತಲೆಯಮೇಲೆ ಬಿದ್ದವು. ಬಂದ ದಿನವೇ ಶರಲೇಖ 'ಅರ್ಜೆಂಟ್ ಕೆಲಸ ' ಅಂತ ಹೇಳಿ, ಇನ್ಸ್ಪೆಕ್ಟರ್ ಉಳ್ಳಾಗಡ್ಡಿಯವರೊಂದಿಗೆ ಬಳ್ಳಾರಿಗೆ ಹೊರಟುಬಿಟ್ಟ, ಒಟ್ಟಿನಲ್ಲಿ ಅಡಿಗೆ ಮನೆಯಲ್ಲಿ ಒಲೆ ಹತ್ತಿ, ಟಿ.ವಿ. ತೆರೆಯಮೇಲೆ 'ನನ್ನ ಹಾಡು ನನ್ನದು ' ಬರುವಂತೆ ಮಾಡುಕ್ಕೆ ಎರಡು ದಿನಗಳೇ ಬೇಕಾದವು. ಹಾಗಾಗಿ ಕಳೆದ ಹಲವು ವಾರಗಳ ಇಂಗ್ಲೆಂಡ್ ಅನುಭವಗಳನ್ನು ಮೆಲಕುಹಾಕಲು ಬಿಡುವಾದದ್ದು ಈಗಲೇ. ಸರೋಜಮ್ಮ ಮಾಡಿಕೊಟ್ಟ ಫಿಲ್ಟರ್ ಕಾಫಿಯನ್ನು ಸವಿಯುತ್ತಾ ಆ ಬೆಳಗ್ಗೆ ಕಿಟಕಿಯ ಬಳಿಯ ಸೋಫಾದ ಮೇಲೆ ಒರಗಿದ್ದೆ. ಕಿಟಕಿ ಆಚೆ ಎಂದಿನಂತೆ ಆಟೋ, ಸ್ಕೂಟರುಗಳ ಮಹಾಪೂರ ಹರಿದಿತ್ತು. ಬರ್ಮಿಂಗ್‌ಹ್ಯಾಮ್‌ನಿಂದ ಲಂಡನ್ನಿಗೆ ಇನ್ಸ್ಪೆಕ್ಟರ್ ಜಿಮ್ ಹಾಗೂ ಅವನ ಗೆಳತಿ ಜೆಸ್ಸಿಕಾ ಮೊರಿಯಾರ್ಟಿ ಜೊತೆ ನಾವು ಮಾಡಿದ ಕಾಲುವೆ ದೋಣಿ ಯಾತ್ರೆಯ ಸಾವಧಾನ ಗತಿ, ನಿಶ್ಯಬ್ಧ ಪರಿಸರಗಳನ್ನು ಈ ಸದ್ದುಗದ್ದಲಗಳಿಗೆ ಹೋಲಿಸಿ ನೋಡಿದಾಗ, ನಿಜಕ್ಕೂ ಅದೊಂದು ಬೇರೆಯದೇ ಪ್ರಪಂಚ ಅನ್ನಿಸಿತು.

ಬರ್ಮಿಂಗ್‌ಹ್ಯಾಮ್‌ನಲ್ಲಿ ನಾವು ಪ್ರವಾಸ ಪ್ರಾರಂಭಿಸಲು ಏರಿದ ದೋಣಿಯ ಹೆಸರು ಸೆರನೇಡ್. ಈ ದೋಣಿ ನಮ್ಮ ಕೇರಳದ ಹೌಸ್‌ಬೋಟುಗಳಷ್ಟು ದೊಡ್ಡದಲ್ಲದಿದ್ದರೂ, ಸಾಕಷ್ಟು ಅನುಕೂಲಗಳಿದ್ದವು. ಬೆಚ್ಚಗಿರಿಸಿದ ಮಲಗುವ ಕೋಣೆಗಳು, ಸುಸಜ್ಜಿತವಾದ ಅಡುಗೆ ಮನೆ, ಎಲ್ಲರೂ ಕುಳಿತು ಹರಟೆ ಹೊಡೆಯಲು ಅನುಕೂಲವಾದ ಲಿವಿಂಗ್ ರೂಮ್, ನಲ್ಲಿಯಲ್ಲಿ ಬಿಸಿನೀರು, ಇವೆಲ್ಲ ಚೆನ್ನಾಗಿಯೇ ಇದ್ದವು ಅನ್ನಿ. ಆದರೆ ದೋಣಿ ನಡೆಸುವುದು, ಅಡುಗೆ ತಯಾರಿಕೆ ಇವುಗಳನ್ನೆಲ್ಲಾ ನಾವೇ ಮಾಡಿಕೊಳ್ಳಬೇಕಾಗಿತ್ತು. ಎಲ್ಲ ಸೆಲ್ಫ್ ಸರ್ವೀಸ್. ಜಿಮ್ ದೋಣಿ ನಡೆಸುತ್ತಿದ್ದದರಿಂದ, ಅದರ ಕಾಳಜಿ ನಮಗಿರಲಿಲ್ಲ. ಇನ್ನು ಬ್ರೆಡ್ಡು ಸೂಪುಗಳ ನಾಡಿನಲ್ಲಿ ಊಟದ ತಯಾರಿ ಒಂದು ಸಮಸ್ಯೆಯೇ.

ನಾವು ಯಾನ ಮಾಡುತ್ತಿದ್ದುದು ಆ ನಾಡಿನ ಅತಿ ಉದ್ದನೆಯ ಕಾಲುವೆ ಮಾರ್ಗದಲ್ಲಿ. ಗ್ರಾಂಡ್ ಯೂನಿಯನ್ ಕೆನಾಲ್ ಎಂಬ ಹೆಸರಿನ ಈ ಕಾಲುವೆ ಉತ್ತರದ ಬರ್ಮಿಂಗ್‌ಹ್ಯಾಮನ್ನು ದಕ್ಷಿಣದ ಲಂಡನ್ನಿಗೆ ಸಂಪರ್ಕಿಸುತ್ತೆ. ಕಾಲುವೆ ಎತ್ತರದ ಗುಡ್ಡಗಳನ್ನು ದಾಟಬೇಕಾದಾಗ ಬಹು ಜಾಣತನದಿಂದ ನೀರನ್ನು ಹಂತಹಂತವಾಗಿ ಮೇಲಕ್ಕೆ ಎತ್ತಿ

ದೋಣಿಸಾಗಲು ಅನುವು ಮಾಡಿರುವುದನ್ನು ನೋಡಿ ನನ್ನಂತೆಯೇ ಶರಲೇಖನಿಗೂ 'ಭಲೇ' ಎನ್ನಿಸಿತು. ಗಂಟೆಗೆ ನಾಲ್ಕು ಕಿಲೋಮೀಟರುಗಳಷ್ಟು ನಿಧಾನವಾಗಿ ಸಾಗುವ ದೋಣಿ, ಲಂಡನ್ ತಲುಪಲು ನಾಲ್ಕು ದಿನಗಳೇ ಬೇಕಾಗುತ್ತೆ. ದಾರಿಯಲ್ಲಿ ಸಂಜೆಯಾಯಿತೆಂದರೆ ಹತ್ತಿರದ ಹಳ್ಳಿಯೊಂದರ ಬಳಿ ದೋಣಿಯನ್ನು ನಿಲ್ಲಿಸಿ, ಆ ಹಳ್ಳಿಯ ಪಾನಗೃಹದಲ್ಲಿ ಸಂಜೆಯನ್ನು ಮೋಜಿನಿಂದ ಕಳೆದು ರಾತ್ರಿ ಹಿಂದಕ್ಕೆ ದೋಣಿಗೆ ಬಂದು ವಿಶ್ರಮಿಸಿ, ಪುನಃ ಬೆಳಗ್ಗೆ ಲಂಗರು ತೆಗೆದು ಯಾತ್ರೆಯನ್ನು ಮುಂದುವರಿಸುತ್ತಿದ್ದೆವು. ನಮ್ಮ ಯಾತ್ರೆಯ ಪೂರ್ಣ ಕಲ್ಪನೆ ಮೂಡಬೇಕಾದರೆ, ಬೆಂಗಳೂರಿನಿಂದ ಶ್ರೀರಂಗಪಟ್ಟಣಕ್ಕೆ ಒಂದು ಕಾಲುವೆ ಜಾಲ ಇತ್ತು ಅಂತಿಟ್ಟುಕೊಳ್ಳಿ. ಬೆಂಗಳೂರಿನಿಂದ ಹೊರಟು, ರಾಮನಗರದಲ್ಲಿ ಒಂದು ರಾತ್ರಿ, ಮದ್ದೂರಿನಲ್ಲಿ ಎರಡನೆಯ ಸಂಜೆ, ಮೂರನೆಯ ರಾತ್ರಿ ಮಂಡ್ಯ ಹೀಗೆ ಸಾಗಿ ನಾಲ್ಕನೆಯ ಸಂಜೆ ಶ್ರೀರಂಗಪಟ್ಟಣ ತಲುಪುವಹಾಗಿತ್ತು ನಿಮ್ಮ ಯಾತ್ರೆ ಅಂತ ಕಲ್ಪಿಸಿಕೊಳ್ಳಿ. ನಿಮ್ಮ ಯಾನದ ಹಾದಿಯುದ್ದಕ್ಕೂ ಎರಡೂ ದಂಡೆಗಳಲ್ಲಿ ದಟ್ಟವಾದ ಹಸಿರು ಗಿಡಮರಗಳಿದ್ದು ಒಟ್ಟು ಯಾತ್ರೆಯಲ್ಲಿ ನಿಮಗೆ ದಾರಿಯಲ್ಲಿ ಸಿಗುವ ಜನಗಳ ಸಂಖ್ಯೆ ಐವತ್ತಕ್ಕೂ ಕಡಿಮೆ ಇದ್ದರೆ ನಿಮ್ಮ ಯಾತ್ರೆ ಎಷ್ಟು ಉಲ್ಲಾಸಕರ ಅಂತ ಊಹಿಸಬಹುದಲ್ಲವೇ. ಹಾಗಿತ್ತು ನಮ್ಮ ಕಾಲುವೆ ದೋಣಿ ಯಾತ್ರೆ.

ಎರಡನೆಯ ಸಂಜೆ ಏಲ್ಸ್‌ಬರಿ ಎಂಬ ಹಳ್ಳಿಯ ಬಳಿ ನಾವು ದೋಣಿಯನ್ನು ನಿಲ್ಲಿಸಿದ್ದೆವು. ನಮ್ಮ ದೋಣಿಯ ಆಸುಪಾಸಿನಲ್ಲೇ ಅನೇಕ ಪ್ರವಾಸೀ ದೋಣಿಗಳು ತಂಗಿದ್ದವು. ದೋಣಿಯಿಂದ ಇಳಿದು ಹಳ್ಳಿಯಲ್ಲಿದ್ದ ಡಕ್ಸ್ ಎಂಡ್ ಡ್ರೇಕ್ಸ್ ಪಾನಗೃಹಕ್ಕೆ ಸಂಜೆಯ ಊಟಕ್ಕೆ ಹೋದೆವು. ಪಾನಗೃಹದ ಮಾಲಿಕ ಫಿಷ್‌ವಿಕ್‌ಗೆ ಜಿಮ್ ನಮ್ಮಿಬ್ಬರನ್ನೂ ಪರಿಚಯಿಸಿದ.

'ಇವರು ಶರಲೇಖ ಅಂತ ಖ್ಯಾತ ಪತ್ತೇದಾರರು, ಇವರು ಅವರ ಮಿತ್ರ ಡಾ|| ವತ್ಸನ'

ಪಬ್ ಮಾಲಿಕ ಫಿಷ್‌ವಿಕ್ ನಮ್ಮಿಬ್ಬರ ಕೈ ಕುಲುಕಿ, 'ಯಾವ ಊರು ತಮ್ಮದು?' ಅಂತ ಶರಲೇಖನನ್ನು ಕುಶಲ ವಿಚಾರಿಸಿದ.

'ನಮ್ಮದು ಬ್ಯಾಂಗಲೂರ್'

'ಓಹೋ ಅಲ್ಲಿರೋ ಸಮುದ್ರ ತೀರ ಜಗತ್ತಿನಲ್ಲೇ ಖ್ಯಾತಿ ಅಲ್ಲವೇ' ಅಂದ ಫಿಷ್‌ವಿಕ್.

ಬೆಂಗಳೂರಿನಲ್ಲಿ ಸಮುದ್ರತೀರ ಎಲ್ಲಿ ಬಂತು ಅಂತ ನಾನು ಯೋಚಿಸುತ್ತಿರುವಾಗಲೇ, ಜಿಮ್ ಮಧ್ಯೆ ಪ್ರವೇಶಿಸಿ,

'ಸ್ವಾಮೀ ಅವರು ಇಂಡಿಯಾದ ಬ್ಯಾಂಗಲೂರ್‌ನಿಂದ ಬಂದಿರೋದು. ನಿಮ್ಮ ಐರ್ಲೆಂಡಿನ ಬ್ಯಾಂಗರ್ ಅಲ್ಲ.' ಅಂತ ಹೇಳಿ ಅವನನ್ನ ಸಾಗಹಾಕಿದ.

ಅಷ್ಟಕ್ಕೇ ಜೆಸ್ಸಿಕಾಗೆ ಕೋಪ ಬಂದುಬಿಟ್ಟಿತ್ತು.

'ತೀರ ಅಷ್ಟೂ ಜನರಲ್ ನಾಲೆಡ್ಜ್ ಬೇಡವೇ. ಈ ಪಬ್ ಓನರ್ಸೇ ಹೀಗೆ, ಮೂರ್ಖಶಿಖಾಮಣಿಗಳು. ನಿಮ್ಮಿಬ್ಬರನ್ನ ಐರ್ಲೆಂಡಿನೋರಾ ಅಂತ ಕೇಳ್ತಾನಲ್ಲಾ ಆ ಪ್ರಭೃತಿ' ಅಂತೆಲ್ಲಾ ರೇಗಾಡಿದಳು. ಅಷ್ಟಕ್ಕೇ ನಮಗೆ ಫಿಷ್‌ವಿಕ್‌ನಿಂದ ಮುಕ್ತಿ ಸಿಗಲಿಲ್ಲ.

ಊಟಮಾಡುತ್ತಿರುವಾಗ ಮಧ್ಯೆ ಪ್ರವೇಶಿಸಿ 'ನೀವು ಡಾಕ್ಟರು ಅಂದರಲ್ಲಾ ಎಂಥ ಡಾಕ್ಟರು? ಏನು ಸ್ಪೆಷಾಲಿಟಿ?' ಅಂತೆಲ್ಲಾ ನನ್ನನ್ನ ವಿಚಾರಿಸಿಕೊಂಡ.

'ನಾನು ಜನರಲ್ ಪ್ರಾಕ್ಟೀಷನರ್. ಫ್ಯಾಮಿಲಿ ಪ್ರಾಕ್ಟೀಸ್ ಮಾಡ್ತೇನೆ' ಅಂದೆ.

ಊಟ ಮುಗಿದ ಮೇಲೆ, ಜಿಮ್,

'ಈ ಹಳ್ಳೀಲಿ ನನ್ನ ಕಸಿನ್ ಇದ್ದಾನೆ. ನಾವಿಬ್ಬರೂ ಅವನನ್ನ ನೋಡಿ ಬರ್ತೀವೆ. ನೀವು ದೋಣಿಗೆ ಹೋಗಿ ವಿಶ್ರಮಿಸಿ' ಅಂತ ಹೇಳಿದ ನಂತರ ಶರಲೇಖ ಮತ್ತು ನಾನು ಕಾಲುವೆ ಬಳಿ ಹೊರಟೆವು. ಆಗ ಸಮಯ ಎಂಟು ಗಂಟೆ ಸುಮಾರು.

ಕಟ್ಟೆಯಿಂದ ದೋಣಿಗೆ ಇಳಿದು ಕೊಠಡಿಗೆ ಹೋದಾಗ ನನಗೊಂದು ಆಘಾತ ಕಾದಿತ್ತು. ಮಂಚದ ಪಕ್ಕದ ಮೇಜಿನ ಮೇಲೆ ಇಟ್ಟಿದ್ದ ನನ್ನ ಬ್ರೀಫ್ ಕೇಸೇ ನಾಪತ್ತೆ. ರೂಮೆಲ್ಲಾ ತಡಕಾಡಿದೆ. ಏನೂ ಪ್ರಯೋಜನವಾಗಲಿಲ್ಲ. ಶರಲೇಖನ ಬಳಿ ಹೋದೆ. ನಾನು ಬಾಯಿಬಿಡುವ ಮುಂಚೆಯೇ 'ನಿನ್ನ ಬ್ರೀಫ್‌ಕೇಸ್ ಕಳುವಾಗಿದೆ ಅಲ್ವೇ, ನನ್ನದೂ ಹೋಗಿದೆ. ಕಳ್ಳೋರು ಏನಾದರೂ ಸುಳಿವು ಬಿಟ್ಟಿದ್ದಾರಾ ಅಂತ ಪರಿಶೀಲಿಸ್ತಾ ಇದ್ದೀನಿ. ಸುಮ್ನೆ ಒಂದು ಕಡೆ ಕೂತ್ಕೊಂಡ್ರೆ ಬಹಳ ಉಪಕಾರ ' ಅಂತ ಪಿಸುಮಾತಿನಲ್ಲಿ ಹೇಳಿದ.

'ಪೋಲೀಸಿನೋರಿಗೆ ಹೇಳೋದು ಬೇಡವೇ?' ನಾನೂ ಪಿಸುಮಾತಿನಲ್ಲೇ ಕೇಳಿದೆ ಆ ನಿರ್ಜನವಾದ ದೋಣಿಯಲ್ಲಿ ಪಿಸುಮಾತಿನ ಅಗತ್ಯವಾದರೂ ಏನಿತ್ತು ಅಂತ ನನಗೆ ಆಗ ಹೊಳೀಲಿಲ್ಲ.

ಶರಲೇಖ ಏನೂ ಉತ್ತರಿಸದೇ ತದೇಕ ಚಿತ್ತದಿಂದ ತನ್ನ ಪರಿಶೀಲನೆಯ ಕಾರ್ಯದಲ್ಲಿ ತೊಡಗಿದ್ದ. ಸ್ವಲ್ಪ ಹೊತ್ತಿನ ಬಳಿಕ 'ಇಲ್ಲೇ ಇರು' ಅಂತ ನನಗೆ ಹೇಳಿ ಅವನು ದೋಣಿಯಿಂದ ಹೊರಗೆ ಹೊರಟು ಹಿಮ ಸುರಿಯುತ್ತಿದ್ದ ಆ ಮಬ್ಬುಗತ್ತಲೆಯಲ್ಲಿ ಅದೃಶ್ಯನಾದ. ನಾನು ಅವನಿಗಾಗಿ ಕಾಯುತ್ತಾ ಕುಳಿತಿರುವುದರ ಹೊರತಾಗಿ ಬೇರೇನೂ ಮಾಡಲು ಸಾಧ್ಯವಿರಲಿಲ್ಲ.

ಒಂದು ಯುಗ ಕಳೆದಮೇಲೆ, (ವಾಸ್ತವವಾಗಿ ಒಂದು ಗಂಟೆಯ ಕಾಲ) ಜಿಮ್ ಮತ್ತೆ ಜೆಸ್ಸಿಕಾ ಬಂದರು. ನಡೆದದದ್ದನ್ನೆಲ್ಲಾ ಅವರಿಗೆ ಹೇಳಿದೆ. ತಕ್ಷಣ ಜಿಮ್ ತನ್ನ ಮೊಬೈಲ್‌ನಿಂದ ಶರಲೇಖನಿಗೆ ಫೋನ್ ಮಾಡಿದ. ಮಾತನಾಡಿ ಮುಗಿಸಿದೊಡನೆಯೇ 'ಜೆಸ್ಸಿಕಾ ನೀನಿಲ್ಲೇ ಇರು ಕಳುವಾದ ಮಾಲು ಸಿಕ್ಕಿದೆಯಂತೆ. ಬೇಗನೆ ಶರಲೇಖನನ್ನು ಕರೆದುಕೊಂಡು ಬಂದುಬಿಡುತ್ತೇನೆ ' ಅಂತ ಹೇಳಿ ಅವನೂ ಕತ್ತಲೆಯ ಗರ್ಭದಲ್ಲಿ ಲೀನನಾದ.

ಜೆಸ್ಸಿಕಾಗೆ ನನಗಿಂತ ಹೆಚ್ಚು ಆತಂಕ. ಆದರೆ ನನ್ನ ಮುಂದೆ ತೋರಿಸಿಕೊಳ್ಳುವಂತಿಲ್ಲ. ಹಾಗಾಗಿ ನಾವಿಬ್ಬರೂ ಲೋಕಾಭಿರಾಮವಾಗಿ ಅದೂ ಇದೂ ಮಾತನಾಡುತ್ತಾ ಕಾಲಕಳೆದೆವು.

ಸ್ವಲ್ಪ ಸಮಯದ ನಂತರ ಶರಲೇಖ ನನ್ನ ಬ್ರೀಫ್ ಕೇಸ್ ಹಿಡಿದುಕೊಂಡು ಬಂದ. ಅವನ ಹಿಂದೆ ಒಬ್ಬ ಧಡೂತಿ ಆಸಾಮಿ ದೋಣಿಯೊಳಗೆ ಬಂದು ಶರಲೇಖನ ಬ್ರೀಫ್ ಕೇಸನ್ನು ಕೆಳಗಿಟ್ಟ. ಕೊನೆಗೆ ಜಿಮ್ ಒಳಗೆ ಬಂದ. ಅವನ ಜೊತೆಯಲ್ಲಿ ಒಬ್ಬ ವಯಸ್ಸಾದ ಮಹಿಳೆ ಕುಂಟುತ್ತಾ ನಡೆದು ಬಂದಳು. ನಾನು ಬೇಗ ಹೋಗಿ ನನ್ನ ಬ್ರೀಫ್‌ಕೇಸನ್ನು ತೆರೆದು ಒಳಗಿನ ವಸ್ತುಗಳೆಲ್ಲಾ ಸರಿಯಾಗಿದೆಯೇ ಎಂಬುದನ್ನು ಪರೀಕ್ಷಿಸಲು ತೊಡಗಿದೆ. ಈ ಯಾತ್ರೆಗೆಂದು

ಬೆಂಗಳೂರಿನಿಂದ ತಂದಿದ್ದ ಔಷಧಿಗಳ ಚೀಲ ಒಂದು ಬಿಟ್ಟು ಮಿಕ್ಕೆಲ್ಲ ಕಾಗದಪತ್ರಗಳೂ ಸರಿಯಾಗಿದ್ದಂತೆ ಕಂಡಿತು.

'ಏನು ಇದೆಲ್ಲದರ ಅರ್ಥ?' ಅಂತ ನಾನು ಶರಲೇಖನನ್ನ ಕೇಳಿದೆ.

ಅಷ್ಟರಲ್ಲಿ ಬಂದು ಕೂತಿದ್ದ ಆ ಧಡೂತಿ ಆಸಾಮೀನೇ ಮಾತನಾಡಲು ಶುರು ಮಾಡಿದ.

'ಸ್ವಾಮಿ, ಎಲ್ಲ ನನ್ನದೇ ತಪ್ಪು. ಅಗೋ ಅಲ್ಲಿ ಕೂತಿರೋಳೇ ನನ್ನ ಪತ್ನಿ ಡಾರೊಥಿ. ಅನೇಕ ವರ್ಷಗಳಿಂದ ಅವಳಿಗೆ ಅರ್ಥ್ರೈಟಿಸ್. ಒಮ್ಮೊಮ್ಮೆ ಅವಳಿಗೆ ವಿಪರೀತ ನೋವುಂಟಾಗಿ ಮಂಡಿ ಹಿಡಿದುಕೊಂಡು ಬಿಡುತ್ತೆ. ಅದಕ್ಕಾಗಿ ಔಷಧಿ ತರಬೇಕಾದರೆ ದಿನಗಟ್ಟಲೆ ಡಾಕ್ಟರ್ ಸರ್ಜರಿಗೆ ಅಲೆದು ಚೀಟಿ ಪಡೆದು ಫಾರ್ಮಸಿಗೆ ಹೋಗಿ ತರಬೇಕು. ಶನಿವಾರ ಭಾನುವಾರ ಬಂದರಂತೂ ಮುಗಿಯಿತು ನಮ್ಮ ಕಥೆ. ಔಷಧಿಗೆ ಸೋಮವಾರದವರೆಗೂ ಕಾಯಬೇಕು. ಮೊನ್ನೆ ನಮ್ಮ ಗ್ರಹಚಾರಕ್ಕೆ ಇವಳು ದೋಣಿ ಪ್ರಯಾಣ ಮಾಡೋಣ ಅಂತ ಹಠಹಿಡಿದಳು. ಹೊರಟಾಗ ಮಂಡಿ ಸರಿಯಾಗೇ ಇತ್ತು ಅನ್ನಿ. ಈ ಹಳ್ಳಿ ಹತ್ತಿರ ಬರೋ ಹೊತ್ತಿಗೆ ಮಂಡಿ ಇನ್‌ಫ್ಲೇಮ್ ಆಗಿ ಅವಳು ಬಾಯಿಬಡಿದುಕೊಳ್ಳಕ್ಕೆ ಪ್ರಾರಂಭಿಸಿದಳು. ನಾನು ಹಳ್ಳಿಯಲ್ಲೆಲ್ಲಾ ಡಾಕ್ಟರ್ ಸರ್ಜರಿಗೆ ತಡಕಾಡಿದೆ. ಶನಿವಾರ ರಜೆ ಅಂತ ಹೇಳಿದರು. ಸುಸ್ತಾಗಿ ಪಾನಗೃಹದ ಹತ್ತಿರ ಬಂದಾಗ ನೀವಿಬ್ಬರೂ ಕೂತಿದ್ದು ಕಂಡಿತು. ಇಂಡಿಯಾದಿಂದ ಬಂದವರಾದರೆ ಅವರ ಹತ್ತಿರ ಇಂತಹ ಎಮರ್ಜೆನ್ಸಿ ಔಷಧಿಗಳಿರುತ್ತವೆ ಅಂತ ಯಾರೋ ಹೇಳಿದ್ದರು. ಪಾನಗೃಹದ ಮಾಲಿಕನ ಮೂಲಕ ನೀವು ಡಾಕ್ಟರ್ ಅಂತ ತಿಳಿದ ಮೇಲಂತೂ ನಿಮ್ಮ ಹತ್ತಿರ ನನಗೆ ಬೇಕಾದ ಔಷಧಿ ಇರುತ್ತೆ ಅಂತ ಖಾತ್ರಿ ಆಯಿತು. ದೋಣಿ ನಿಲ್ದಾಣಕ್ಕೆ ಹೋಗಿ ನಿಮ್ಮ ದೋಣಿ ಪತ್ತೆ ಮಾಡಿದೆ. ನಿಮ್ಮಿಬ್ಬರ ಬ್ರೀಫ್‌ಕೇಸುಗಳೂ ಕಾಣುವಂತೆಯೇ ಇದ್ದವು. ಅವಸರದಲ್ಲಿ ಅವುಗಳನ್ನು ಬಾಚಿಕೊಂಡು ನನ್ನ ದೋಣಿಗೆ ಓಡಿದೆ. ಸಧ್ಯ ನನ್ನ ಅಂದಾಜು ಸುಳ್ಳಾಗಲಿಲ್ಲ. ಔಷಧಿ ಸಿಕ್ಕಿತು. ಈಗ ನೋಡಿ ಅವಳು ಕುಂಟಿಕೊಂಡು ನಡೆಯುವಷ್ಟಾದರೂ ಆಗಿದೆ. ತಪ್ಪೇನೋ ಮಾಡಿಬಿಟ್ಟೆ. ನೀವು ಡಾಕ್ಟರು. ರೋಗಿಗಳ ಕಷ್ಟ ನಿಮಗಲ್ಲದೇ ಇನ್ನು ಯಾರಿಗೆ ಅರ್ಥವಾದೀತು. ದಯವಿಟ್ಟು ಕ್ಷಮಿಸಿ ಬಿಡಿ.' ಅಂತ ಅಂಗಲಾಚಿದ.

'ಕ್ಷಮಿಸುಕ್ಕೆ ನಾನ್ಯಾರು. ಆದರೂ ನಮ್ಮನ್ನ ಬಾಯಿಬಿಟ್ಟು ಕೇಳಿದ್ದರೆ ಇಲ್ಲ ಅಂತಿದ್ದೆವೇ' ಅಂದೆ. ಅಷ್ಟರಲ್ಲಿ ಶರಲೇಖ , 'ಆಯಿತು ನೀವಿಬ್ಬರೂ ಹೋಗಿಬನ್ನಿ, ಈ ಚಳಿಯಲ್ಲಿ ಹೊರಗೆ ಓಡಾಡಿದರೆ ಮತ್ತೆ ಔಷಧಿಗೆ ಪರದಾಡಬೇಕಾಗುತ್ತೆ' ಅಂತ ಹೇಳಿ ಆ ದಂಪತಿಗಳನ್ನು ಸಾಗಹಾಕಿದ.

ಅವರು ಹೊರಟಮೇಲೆ ಜೆಸ್ಸಿಕಾ, 'ಅವರೇ ಕದ್ದವರು ಅಂತ ಅಷ್ಟು ಬೇಗ ಹೇಗೆ ಪತ್ತೆ ಹಚ್ಚಿದೆ ಶರಲೇಖ?' ಅಂತ ಕುತೂಹಲದಿಂದ ಕೇಳಿದಳು.


ಶರಲೇಖ ತನ್ನ ವಿವರಣೆ ಪ್ರಾರಂಭಿಸಿದ.

'ಪತ್ತೇದಾರ ಅಂದಮೇಲೆ ಕೆಲವು ಆಂಟೆನಾಗಳು ಸದಾ ಜಾಗೃತವಾಗಿರುತ್ವೆ. ಫಿಷ್‌ವಿಕ್ ನಿನ್ನ ವೃತ್ತಿ ವಿಚಾರಿಸಿಕೊಂಡಾಗ ಅವನ ಮೇಲೆ ಒಂದು ಕಣ್ಣಿಟ್ಟೆ. ನಮ್ಮ ಹತ್ತಿರ ಮಾತನಾಡಿದ

ನಂತರ ಅವನು ಆಚೆ ಟೇಬಲ್ಲಿಗೆ ಹೋಗಿ ಈ ಧಡೂತಿ ಆಸಾಮಿ ಹತ್ತಿರ ಏನೋ ಪಿಸುಗುಟ್ಟಿದ್ದನ್ನು ನೋಡಿದೆ. ದೋಣಿಗೆ ಹಿಂತಿರುಗಿದಾಗ ನಮ್ಮ ಬ್ರೀಫ್‌ಕೇಸ್ ಇಟ್ಟಿದ್ದ ಜಾಗದ ಬಳಿ ಕಾರ್ಪೆಟ್ ಮೇಲೆ ಒಂದು ಕ್ರೆಡಿಟ್ ಕಾರ್ಡ್ ಬಿದ್ದಿತ್ತು. ಸರಿ, ಕಳುವು ಮಾಡುವ ಅವಸರದಲ್ಲಿ ಕಾರ್ಡ್ ಬೀಳಿಸಿಕೊಂಡಿದೆ ಪ್ರಾಣಿ ಅಂದುಕೊಂಡೆ. ಕಾರ್ಡಿನ ಮೇಲೆ ಅವನ ಫೋಟೋ ಇತ್ತು. ಸರಿ ಧಡೂತಿ ಆಸಾಮಿಯದೇ ಕೆಲಸ ಅಂತ ಖಾತ್ರಿ ಆಯಿತು. ನಿಲ್ದಾಣದ ಅಧಿಕಾರಿ ಹತ್ತಿರ ಹೋಗಿ, ಅವರಿಗೆ ನಾನ್ಯಾರು ಅಂತ ತಿಳಿಸಿ, ಈ ಕಾರ್ಡನ್ನ ಮಾಲಿಕನಿಗೆ ಹಿಂತಿರುಗಿಸಬೇಕು. ಅವರು ಯಾವ ದೋಣಿಯಲ್ಲಿದ್ದಾರೆ ಅಂತ ಕೇಳಿದೆ. ಅವನಿಂದ ಅವರ ದೋಣಿ ವೈಲ್ಡ್ ಹೆಮ್‌ಲಾಕ್ ಅಂತ ತಿಳೀತು. ಅಷ್ಟು ಹೊತ್ತಿಗೆ ಜಿಮ್‌ನ ಕಾಲ್ ಬಂತು. ಸರಿ, ಅವನನ್ನೂ ಕರೆದುಕೊಂಡು ಹೋಗಿ ನಮ್ಮ ಮಾಲನ್ನ ಹಿಂಪಕ್ಕೆ ಪಡುದುಕೊಂಡು ಬಂದೆ.'

ಇಷ್ಟೆಲ್ಲಾ ಹಗಲುಗನಸು ಕಾಣುವ ವೇಳೆಗೆ ಬಾಗಿಲ ಕರೆಗಂಟೆ ಕಿಚುಗುಟ್ಟಿತು. ಬಾಗಿಲು ತೆರೆದೆ. ಶರಲೇಖ ಮತ್ತು ಉಳ್ಳಾಗಡ್ಡಿ ಒಳಕ್ಕೆ ಬಂದರು. ಉಳ್ಳಾಗಡ್ಡಿಗೆ ಶರಲೇಖ ನಮ್ಮ ಇಂಗ್ಲೆಂಡ್ ಅನುಭವಗಳನ್ನೆಲ್ಲಾ ಹೇಳಿದ್ದ ಅಂತ ಕಾಣುತ್ತೆ. ಬಂದ ತಕ್ಷಣ ಅವರು ನನ್ನನ್ನು ಕುರಿತು, 'ಏನ್ರೀಯಪ್ಪಾ, ನಮ್ ಸಾಹೇಬ್ರು ಮೋರಿಯಾರ್ಟಿಯವರ್ನ ಭೇಟಿಮಾಡಿದ್ರಂತಲ್ರೀ, ಶರಲೇಖ , ಮೋರಿಯಾರ್ಟಿ ಅಂದರ ಏನೋ ಹಳೇ ನೆನಪು ಕೆದಕಿಧಂಗ ಆಗ್ತದಲ್ರೀ, ಏನೂ ಅಂತ ತಿಳೀವಲ್ದು' ಅಂತ ತಲೆ ಕೆರೆದುಕೊಂಡರು.

'ಏನಿಲ್ಲ ಬಿಡ್ರೀ ಸಾಹೇಬ್ರ, ಆಗ ನಿಮ್ಮ ಬಳ್ಳಾರಿ ಅರ್ಜೆಂಟ್ ಕೇಸ್ ಬಗ್ಗೆ ತಿಳಿಸ್ರಲ್ಲಾ' ಅಂತ ಕೇಳಿದೆ. ಅದೇ ಬೇರೇ ಕಥೆ ಅಂತಿಟ್ಟುಕೊಳ್ಳಿ.



ವಿದ್ಯಮಾನಗಳು

- ಕು.ಕ.

ಯುಗ ಯುಗಾದಿ ಕಳೆದರೂ (ಕ್ರೈಸ್ತ) ಯುಗಾದಿ ಮರಳಿ ಬರುತಿದೆ. ಹೊಸ ವರುಷಕೆ ಹೊಸ ಹಗರಣಗಳಿಗೆ ಹೊಸ ರಾಜಕೀಯ ಮಂಗಾಟಗಳಿಗೆ ಇನ್ನಷ್ಟು ಮತ್ತಷ್ಟು ಅವಕಾಶಗಳನ್ನು ತೆರೆಯುತಿದೆ. ಅಕ್ಟೋಬರ್‌ನಿಂದ ವರ್ಷದ ಕೊನೆಯವರೆಗೆ ನಡೆದ ರಾಜಕೀಯ ಘಟನೆಗಳನ್ನು ನೋಡಿದಾಗ ಸದ್ಯ 2007 ತೊಲಗಿತಲ್ಲ ಎಂದು ಸಮಾಧಾನ ಪಡಬಹುದೇನೋ. ಆದರೆ ಮುಂದಿನ ಏಪ್ರಿಲ್-ಮೇ ಚುನಾವಣೆಯಲ್ಲಿ ಯಾರು ಹಿತವರು ಈ ಮೂವರೊಳಗೆ ಎನ್ನುವ ಪ್ರಶ್ನೆಗೆ ಸ್ಪಷ್ಟ ಉತ್ತರ ಬರದೆ ಅವರನ್ನು ಬಿಟ್ಟು ಇವರಿಬ್ಬರು ಅಥವ ಇವರನ್ನು ಬಿಟ್ಟು ಅವರಿಬ್ಬರು ಒಟ್ಟಾಗಲೇ ಬೇಕಾಗುತ್ತದೆ. ಮತ್ತೆ ದೇವೇಗೌಡರ ಪಾದವೇ ಗತಿಯಾದರೂ ಆಗಬಹುದು.

★★★

ಇಲ್ಲಿ ಕರ್ನಾಟಕದಲ್ಲಿ ನಮಗೆ ಮೂವರು ಅಹಿತರಲ್ಲಿ, ಇನ್ನಿಬ್ಬರಿಗಿಂತ ಜೂರು ವಾಸಿ ಎನಿಸುವ ಮೂರನೆಯವರನ್ನು ಆರಿಸಲೇಬೇಕಾದ ಸಂಕಟ. ಆದರೆ ಅಲ್ಲಿ ಗುಜರಾತಿನ ಜನರಿಗಿದ್ದ ಆಯ್ಕೆ ನೇರ - ನರೇಂದ್ರ ಮೋದಿ ಬೇಕೇ ಬೇಡವೇ. ಈ ಮೋದಿಗೆ ನಮ್ಮ ಬುದ್ಧಿಜೀವಿಗಳ ಡೆಮನಾಲಜಿಯಲ್ಲಿ, ದ್ವೇಷಿಸಬೇಕಾದವರ ಪಟ್ಟಿಯಲ್ಲಿ ಮೊದಲ ಸ್ಥಾನ. ಶ್ರೀ ವಿಷ್ಣುವಿಗೆ ಅಷ್ಟೋತ್ತರ ಶತನಾಮಾವಳಿಗಳಿದ್ದರೆ, ಮೋದಿಗೆ ಕಾಂಗ್ರೆಸಿಗರು ಮತ್ತು ಜಾತ್ಯತೀತರು ಸೃಷ್ಟಿಸಿರುವ ಕೋಟಿ ಕೋಟಿ ಬೈಗುಳಗಳು. ತಾವೇ ಆರಿಸಿಕೊಂಡಿದ್ದ ಮುಖ್ಯ ಮಂತ್ರಿಯನ್ನು ಕುರಿತ ಇಷ್ಟೊಂದು ಬೈಗುಳಗಳನ್ನೂ ಸಹಿಸಿಕೊಂಡಿದ್ದ ಗುಜರಾತಿನ ಜನತೆಗೆ ಇನ್ನೊಂದೇ ಒಂದು ಬೈಗುಳ ಅದೇನೋ ಹೇಳುತ್ತಾರಲ್ಲ ಲಾಸ್ಟ್ ಸ್ಟ್ರಾ- ಕೊನೆಯ ಹುಲ್ಲಿನ ಗರಿ ಆಯಿತಂತೆ. ಮೇಡಂ ಸೋನಿಯಾ ಮೋದಿಯನ್ನು ಮೌತ್ ಕಾ ಸೌದಾಗರ್ -ಸಾವಿನ ಮಾರಾಟಗಾರ ಎಂದರು, ಜನ ಹದ್ ಹೋಗಯೀ, ದಿಸ್ ಇಜ್ ದಿ ಲಿಮಿಟ್ ಎಂದು ಮೋದಿ ಪರವಾಗಿ ತಿರುಗಿದರು. ಮೋದಿ ವರ್ಸಸ್ ರೆಸ್ಟ್ ಮಹಾಕಾಳಗದಲ್ಲಿ ಮೋದಿಯೇ ಗೆದ್ದಿದ್ದಾರೆ. ಈ ಗೆಲುವಿಗೆ ಬಿಜೆಪಿ ಮಂದಿ ಸೋನಿಯಾಗೆ ಮತ್ತೆ ಮತ್ತೆ ಥ್ಯಾಂಕ್ ಯೂ ಮೇಡಂ ಎಂದು ಹೇಳುತ್ತಿದ್ದಾರಂತೆ.

★★★

ಜಾಗತೀಕರಣದ ಈ ಕಾಲದಲ್ಲಿ ಮೋದಿ ಜಯ ಇಲ್ಲಿ ನಮ್ಮ ಕರ್ನಾಟಕದ ರಾಜಕೀಯದ ಮೇಲೂ ಪ್ರಭಾವ ಬೀರೇ ಬೀರುತ್ತದೆ. ಬಿಜೆಪಿಯೋ ಬಿಎಸ್‌ಪಿಯೋ ಎನ್ನುವ ದ್ವಂದ್ವದಲ್ಲಿರುವ ನಮ್ಮ ಇಂಟಲೆಕ್ಚುಲ್ ನಾಯಕ ಎಂಪಿಪಿ ಅಂಡ್ ಕಂಪೆನಿಗೆ ಈಗ ಬಿಜೆಪಿ ಸೇರಲು ಹಾದಿ ಸುಗಮವಾಗಿದೆ. ಜೊತೆಗೆ ಕಾಂಗ್ರೆಸಿಗರಲ್ಲಿ ಇಲ್ಲೂ ಮಾಯಾವತಿ ಫ್ಯಾಕ್ಟರ್ ಕೆಲಸ ಮಾಡಬಹುದೇನೋ ಎನ್ನುವ ಪುಕ್ಕಲು. ಸತತವಾಗಿ ಪಂಜಾಬ್, ಉತ್ತರಾಖಾಂಡ್,


ಯೂಪಿ, ಗುಜರಾತ್ ರಾಜ್ಯಗಳಲ್ಲಿ ಸೋಲು ಅನುಭವಿಸಿರುವ ಕಾಂಗ್ರೆಸಿಗೆ ಈಗ ಕರ್ನಾಟಕವನ್ನಾದರೂ ಗೆಲ್ಲಲೇಬೇಕೆಂಬ ಛಲ. ಸಾಧಾರಣವಾಗಿ ಎಲ್ಲಾ ಚುನಾವಣೆಗಳಲ್ಲಿಯೂ ಹಣ ನೀರಿನಂತೆ ಹರಿಯುತ್ತದೆ. ಕರ್ನಾಟಕದಲ್ಲಿ ಬರಲಿರುವ ಚುನಾವಣೆಯಲ್ಲಿ ಹಣ ಪ್ರವಾಹ ಬಂದ ನದಿಯ ನೀರಿನಂತೆ ಹರಿಯುವ ಎಲ್ಲಾ ಸೂಚನೆಗಳಿವೆ.

★★★

ಈಗ ಕರಾವಳಿಯ ಉಡುಪಿ ಮೋಸ್ಟ್ ಹ್ಯಾಪನಿಂಗ್ ಸಿಟಿ, ಅತಿ ಹೆಚ್ಚಿನ ಸಂಖ್ಯೆಯ ವಿದ್ಯಮಾನಗಳು ನಡೆಯುತ್ತಿರುವ ಪಟ್ಟಣ. ಎಲ್.ಎಸ್.ಎಸ್. ಅಧ್ಯಕ್ಷತೆಯ ಸಾಹಿತ್ಯ ಸಮ್ಮೇಳನ, ಚಂಪಾ ಇದ್ದರೂ ಗಲಾಟೆಯಿಲ್ಲದೆ ಮುಗಿದಿದೆ. ಎಲ್ಲಾ ಸಾಹಿತ್ಯ ಸಮ್ಮೇಳನಗಳಂತೆಯೇ ಇಲ್ಲಿಯೂ ಭೂರಿ ಭೋಜನಗಳದ್ದೇ ಸುದ್ದಿ. ಇದೇ ಉಡುಪಿ ನಗರದಲ್ಲಿಯೇ ಮೀನಿನ ಸಾರು ವಿಶೇಷ ಆಕರ್ಷಣೆಯಾಗಿದ್ದ ಅಸಲಿ ಜಾತ್ಯತೀತರ ಪರ್ಯಾಯ ಸಾಹಿತ್ಯ ಅಥವ ಅಲ್ಲಿಲ್ಲದ ಬಂಡವಾಳಿಶಾಹಿಗಳನ್ನು, ಬುಷ್ ಬಂಟರನ್ನು, ಸಂಘ ಪರಿವಾರದವರನ್ನು ಮಾತುಗಳ ಮೂಲಕ ಹಿಗ್ಗಾ ಮುಗ್ಗಾ ಥಳಿಸಿದ ಸೌಹಾರ್ದ ಸಮ್ಮೇಳನವೂ ಮುಗಿದಿದೆ. ಈಗ ನಗರ ಒರಿಜಿನಲ್ ಅಷ್ಟಮಠಗಳ ಪರ್ಯಾಯಕ್ಕೆ ಸಿದ್ಧವಾಗುತ್ತಿದೆ. ಇಲ್ಲಿ ಇನ್ನೂ ಸಮುದ್ರ ಲಂಘನ ಮಾಡಿರುವ ಯತಿಗಳಿಗೆ ಶ್ರೀಕೃಷ್ಣನನ್ನು ಪೂಜೆ ಮಾಡಲು ಸಂಪ್ರದಾಯ ಒಪ್ಪುತ್ತದೆಯೇ ಇಲ್ಲವೇ ಎನ್ನುವ ಅಗ್ದಿ ಜ್ವಲಂತ ಪ್ರಶ್ನೆ ಕಾಡುತ್ತಿದೆ.

★★★

ಮತ್ತೆ ಮೊದಲ ವಿಷಯ 2007ಕ್ಕೇ ಬರೋಣ. ಇದು ಕೆಟ್ಟ ವರ್ಷ, ಸದ್ಯ ಹೋಯಿತಲ್ಲ ಎಂದು ಸಮಾಧಾನ ಪಡಬಹುದು. ಆದರೆ ಒಟ್ಟಾಗಿ ನೋಡಿದಾಗ 2007 ಒಳ್ಳೆಯ ವರ್ಷವೇ. ಈ ವರ್ಷ ಬೇಸಿಗೆಯಲ್ಲಿ ಬಿಸಿಲು, ಮಳೆಗಾಲದಲ್ಲಿ ಮಳೆ, ಚಳಿಗಾಲದಲ್ಲಿ ಚಳಿ ಎಲ್ಲಾ ಕಾಲ ಕಾಲಕ್ಕೆ ತಕ್ಕಂತೆ ಬಂದಿವೆ. ನಮ್ಮ ಪ್ರಕೃತಿ ನಿರ್ಮಿತ, ಮಾನವ ನಿರ್ಮಿತ ಸರೋವರಗಳೆಲ್ಲಾ ತುಂಬಿ ತುಳುಕಾಡುತ್ತಿವೆ. ಆ ಜಾತಿಯವರಿಗಿಷ್ಟು, ಈ ಮಠಕ್ಕಿನ್ನಿಷ್ಟು ಎಂದು ಯಡ್ಯೂರಪ್ಪನವರು ಸರ್ಕಾರಿ ಹಣವನ್ನು ಖರ್ಚು ಮಾಡಿದ್ದರೂ ರಾಜ್ಯದ ಬೊಕ್ಕಸವೂ ತುಂಬಿ ತುಳುಕಾಡುತ್ತಿದೆಯಂತೆ. ಒಂದೇ ವರ್ಷದಲ್ಲಿ ಎರಡು ಸಾಹಿತ್ಯ ಸಮ್ಮೇಳನಗಳಾಗಿವೆ. ಮಂಗಳೂರಿನಿಂದ ಎಂದೋ ಹೊರಟ ರೈಲು ಮೂರು ನಾಲ್ಕು ವರ್ಷಗಳಷ್ಟು ತಡವಾಗಿಯಾದರೂ ಬೆಂಗಳೂರು ತಲಪಿದೆ. ಆವರಣ ಈ ವರ್ಷದಲ್ಲಿಯೇ ಹದಿನಾಲ್ಕು ಬಾರಿ ಪುನರ್‌ಮುದ್ರಣವಾಗಿದೆ. ಮುಂಗಾರು ಮಳೆ ಆಲ್ ಟೈಂ ಹಿಟ್ಟಾಗಿದೆ. ನಮ್ಮ ದ್ರಾವಿಡ್ ವಿದೇಶದಲ್ಲಿ ಎರಡು ಸರಣಿ ವಿಜಯ ತಂದು ಕೊಟ್ಟಿದ್ದರೆ, ಕುಂಬ್ಳೆ ಕ್ಯಾಪ್ಟನ್ನಾಗಿ ಪಾಕಿಸ್ತಾನಕ್ಕೆ ಮಣ್ಣುಮುಕ್ಕಿಸಿದ್ದಾರೆ. ಇಪ್ಪತ್ತೈದರ ಅಪರಂಜಿ ಎಲ್ಲರಿಂದಲೂ ಸೈಯೆನ್ನಿಸಿಕೊಂಡಿದ್ದಾಳೆ.



ಪಡುಕೋಣೆ ರಮಾನಂದರಾವ್ ಸ್ಮಾರಕ ಹಾಸ್ಯ ಲೇಖನ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದ ಲೇಖನ

ಪಾಕ ಪರಾಕ್ರಮ

- ಪ. ರಾಮಕೃಷ್ಣ ಶಾಸ್ತ್ರಿ

ನನ್ನ ಹೆಂಡತಿ ಹೊಸ ರುಚಿ ಮಾಡುತ್ತೇನೆಂದು ಮೈಸೂರು ಪಾಕು ಮಾಡಲು ಹೋಗಿ ಅದು ಪಾಯಸವಾಗುವುದಿತ್ತು. ತಪ್ಪಿದರೆ ನೆಲಕ್ಕೆ ಹಾಸುವ ಮಾರ್ಬಲ್‌ಗಿಂತ ಗಟ್ಟಿಯಾಗುತ್ತಿತ್ತು. ಮದುವೆಯಾದ ಹರಯದಲ್ಲಿ ನಾನು ಅವಳ ಮೋಹಕ್ಕೆ ಬಲಿಪಶುವಾಗಿ ಇವನ್ನೆಲ್ಲ ರುಚಿ ನೋಡುವ ಸಾಹಸಕ್ಕಿಳಿಯುತ್ತಿದ್ದೆ. ದೂರ ದರ್ಶನದಲ್ಲಿ ಟ್ಯೂಬ್‌ಲೈಟ್ ತಿನ್ನುವವರು, ಚೇಳು, ಹಲ್ಲಿ ನುಂಗುವವರನ್ನು ಕಂಡ ಮೇಲೆ ಇದೇನು ಮಹಾ ಅಂತಂದು ಕೊಂಡರೂ ಕಾಲಕ್ರಮೇಣ ಅದಾದರೂ ತೊಂದರೆಯಿಲ್ಲ, ಇದಂತೂ ಆಗಲಿಕ್ಕಿಲ್ಲ ಎನ್ನುವ ಭಾವನೆ ಬಂದುಬಿಡುತ್ತಿತ್ತು. ಎಣ್ಣೆ ಬದನೆಕಾಯಿ ತಿಂದು ಮರುದಿನ ಚಡ್ಡಿ ಕಳಚುವಷ್ಟು ಪುರಸೊತ್ತಿಲ್ಲದೆ, ನಾರದ ಮುನಿ ಮೂರುಮುಕ್ಕಾಲು ಗಳಿಗೆಯಲ್ಲಿ ಹದಿನಾಲ್ಕು ಲೋಕ ಸುತ್ತಿದ ಹಾಗೆ ಮನೆಯಿಂದ ಶೌಚಾಲಯಕ್ಕೆ ಸುತ್ತಾಡಿ, ಸುಸ್ತಾಗಿ ಎನರ್ಜಿಯೆಲ್ಲ ಖಾಲಿ ಮಾಡಿಕೊಂಡಿದ್ದೆ.

ಹಾಗೆಯೇ ಗೆಳೆಯರನ್ನು ಕರೆದು ಇವಳ ಹೊಸರುಚಿಯ ಪರಿಚಯ ಮಾಡಿಸಿದ ಫಲವಾಗಿ ಮನೆಗೆ ಕರೆದಾಗ ಅವರು ಭಗೀರಥನಂತೆ ನೆತ್ತಿಯ ಮೇಲೆ ಕೈ ಜೋಡಿಸಿ, 'ಮಹಾರಾಯಾ, ಗರುಡ ಪುರಾಣದಲ್ಲಿ ಹೇಳಿದ ಯಾವ ಶಿಕ್ಷೆಯಾದರೂ ಸರಿ, ಆದೀತು. ಇದೊಂದು ಮಾತ್ರ ಬೇಡ' ಎನ್ನುತ್ತಿದ್ದರು.

ಹೀಗಾಗಿ ಕಾಲ ಸರಿದಂತೆ ನಾನು ಅವಳು ಕೊಡುವ ಪನಿಷ್‌ಮೆಂಟಿನಿಂದ ಪಾರಾಗಲು ಅನ್ಯಥಾ ದಾರಿಯಿಲ್ಲದೆ 'ಬೇಡ ಕಣೇ. ನಿನ್ನ ಹೊಸರುಚಿ ತಿನ್ನಿಸಿ ನನ್ನನ್ನು ಕೊಲ್ಲಬೇಡ. ವಿದೇಶಗಳಲ್ಲಿ ಹೊಸ ಶಾಂಪೂ ಕಂಡು ಹಿಡಿದರೆ ಮೊಲದ ಕಣ್ಣಿಗೆ ಹಾಕಿ ಪರೀಕ್ಷಿಸುತ್ತಾರೆ. ಹೊಸ ಮೆಡಿಸನ್‌ನ ಪ್ರಯೋಗ ನಡೆಯುವುದು ಯುದ್ಧ ಖೈದಿಗಳ ಮೇಲೆ. ನಿನ್ನ ವಿಶೇಷಣೆಗಳನ್ನು ನನ್ನ ಮೇಲೆ ಪ್ರಯೋಗಿಸಿ ನಿಧಾನವಾಗಿ ನನ್ನನ್ನು ಲಗಾಡಿ ತೆಗೆಯಬೇಡ' ಎಂದು ಕೈ ಮುಗಿದು ಗೋಗರೆಯಲಾರಂಭಿಸಿದೆ.

'ಒಮ್ಮೆ ಅಡುಗೆ ಕೆಟ್ಟು ಹೋಯಿತು. ಅಂದ ಮಾತ್ರಕ್ಕೆ ಯಾವಾಗಲೂ ಹಾಗೇನೆ ಇರಬೇಕೆ? ಇಷ್ಟಕ್ಕೂ ಎಕ್ಸ್‌ಪರ್ಟ್ ಅಡುಗೆ ಭಟ್ಟರೂ ಒಮ್ಮೊಮ್ಮೆ ಅಡುಗೆ ಕೆಡಿಸೋದಿಲ್ವೆ?' ಎಂದಳು ಹೆಂಡತಿ.

'ಆ ಮಾತು ಹೇಳಬೇಡ' ಎಂದೆ. 'ಅಡುಗೆ ಭಟ್ಟರು ಬೇರೆ ಬೇರೆ ಪಾಕಕ್ಕೆ ಅದ್ದಿದ ಸೌಟನ್ನು ತೊಳಿದ ನೀರಿಗೆ ಒಂದು ಒಗ್ಗರಣೆ ಹಾಕಿದರೂ ಉಣ್ಣಲು ರುಚಿಯಾಗಿರುತ್ತದೆ. ನಳ ಅಡುಗೆ ಮಾಡಿದ ಬಳಿಕ ಯಾವುದೋ ಸೊಪ್ಪಿಗೆ ಕೈಯೊರೆಸಿದಾಗ ಅದು ವಿಶಿಷ್ಟ ರುಚಿ ನೀಡುವ ಕರಿಬೇವು ಅನಿಸಿತಂತೆ. ಹಾಗೆಯೇ ಭೀಮ ಅಡುಗೆಯ ಬಳಿಕ ಕೈಯೊರಿಸಿದ ಸೊಪ್ಪು ಅದೇ ರೀತಿಯ ನೆರಿಗಳ ಸೊಪ್ಪಾಯಿತು. ಹೆಂಗಸರು ಕೈಯಲ್ಲ, ಇಡೀ ಮೈಯನ್ನೇ ಒರೆಸಿಕೊಂಡರೂ

ಅಂತಹ ಗುಣ ಬರಲಿಕ್ಕಿಲ್ಲ. ರುಚಿಕರ ಅಡುಗೆಯಲ್ಲಿ ಹೆಸರು ಮಾಡಿದ ಹೆಂಗಸರೂ ಇಲ್ಲ. ಶೂರ್ಪನಖಿ, ಪೂತನಿ, ರಂಭೆ, ಊರ್ವಶಿ, ಸೀತೆ, ತಾರೆ ಯಂತಹ ಖ್ಯಾತನಾಮರೂ ಅಡುಗೆಯಲ್ಲಿ ಪಳಗಿರಲಿಲ್ಲ' ಎಂದು ನಾನು ಹೊಸದಾಗಿ ಶೋಧನೆಯ ಹೊಳಹೊಂದನ್ನು ಆತ್ಮಹತ್ಯಾ ದಳದ ಬಾಂಬಿನ ರೀತಿ ಸ್ಫೋಟಿಸಿದೆ.

ಅಷ್ಟೇ ಸಾಕಾಯಿತು ಮನದನ್ನೆಗೆ. ಮರುದಿನ ಬೆಳಗ್ಗೆ ಏಳುವಾಗಲೇ ಚೊಂಬು ಮತ್ತು ಚಾಪೆ ದೂರ ಇಟ್ಟುಕೊಂಡು ಕುಳಿತಿದ್ದಾಳೆ. ಹೋರಾಟವಿಲ್ಲದೆ ಪಕ್ಕಿನ ರಜೆ ತೆಗೆದುಕೊಂಡಿದ್ದಾಳೆ. ಮೂರು ದಿನಗಳ ಕಾಲ ಅಡುಗೆಯ ಆಧಿಪತ್ಯ ನಿಮ್ಮದೇ ಎಂಬಂತೆ ಕಣ್ಣಿನಲ್ಲೇ ಇರಿಯುತ್ತಿದ್ದಾಳೆ. ಮನೆಯಲ್ಲಿ ಅಮ್ಮನೂ ಇಲ್ಲ. ಯಾವುದಾದರೂ ಹೋಟೆಲಿಗೆ ಹೋಗಿ ಗೋದಾಮು ಭರ್ತಿ ಮಾಡಿ ಬರೋಣವೆಂದರೆ ಸಂಪ್ರದಾಯವಾದಿ ಹೆಂಡತಿ ಮನೆಯಿಂದ ಹೊರಡಲು ತಯಾರಿಲ್ಲ ಎನ್ನುತ್ತಾಳೆ.

ಸರಿ, ಅಡುಗೆಯಲ್ಲಿ ಗಂಡಸರ ಸಾಮರ್ಥ್ಯವನ್ನು ಪಣಕ್ಕಿಟ್ಟು ತೋರಿಸಲು ಇದು ಸಕಾಲವೆನಿಸಿತ್ತು. ಅಡುಗೆ ಮನೆಗೆ ನುಗ್ಗಿದೆ. 'ಒಲೆ ಉರಿಸಲು ನಿಮಗೆ ಕಷ್ಟವಾದೀತು. ಸೀಮೆಣ್ಣೆ ಸ್ಟೌನಲ್ಲಿ ಕಾಫಿ ಮಾಡಿ' ಎಂದಳು ಹೆಂಡತಿ ಹೊರಗಿನಿಂದಲೇ. ಗಂಡಸೆನಿಸಿದವನಿಗೆ ಅಸಾಧ್ಯ ಎನ್ನುವ ಪದ ಯಾವ ಅರ್ಥಕೋಶದಲ್ಲೂ ಇಲ್ಲವೆನ್ನುವವನು ನಾನು. 'ಏನೇ, ಸೀಮೆಣ್ಣೆಗೆ ದುಡ್ಡು ತೆರುವವನು ನಾನು. ನಿನ್ನಪ್ಪ ನಿನ್ನನ್ನು ಕೊಡುವಾಗ ಓಬೀರಾಯನ ಕಾಲದ ಹದಿನಾರು ರೂಪಾಯಿ ವರದಕ್ಷಿಣೆ ಬಿಟ್ಟರೆ ಬೇಕಾಬಿಟ್ಟಿ ಸೀಮೆಣ್ಣೆಗೆ ಅಂತ ಗುಳಿ ಮುಕ್ಕಾಲು ಕೊಡ ಕೊಟ್ಟಿಲ್ಲ' ಎಂದು ನಿಷ್ಠುರವಾಗಿಯೇ ಹೇಳಿದೆ. ಒಲೆಯಲ್ಲಿ ಸೌದೆ ಇರಿಸಿ, ಮೇಲಿಂದ ತೆಂಗಿನ ಒಣಗರಿಯನ್ನಿರಿಸಿ ಬೆಂಕಿ ಕಡ್ಡಿ ಗೀರುವುದು, ಅದನ್ನು ಉರಿಸಲು ಪ್ರಯತ್ನಿಸುವುದು ಇದೇ ಕೆಲಸ ಮಾಡಿದೆ. ಗೀರಿ ಗೀರಿ ಒಂದು ಬೆಂಕಿಪೊಟ್ಟಣ ಪೂರ್ತಿ ಖಾಲಿ ಯಾಯಿತು. ಹೆಣಗಳು ರಾಶಿ ಬಿದ್ದ ಹಾಗೆ ಕಡ್ಡಿಗಳು ಬಿದ್ದುಕೊಂಡರೂ ಗರಿ ಮಾತ್ರ ಉರಿಯಲಿಲ್ಲ.

ಸೋಲೊಪ್ಪಲು ನಾನೂ ಸಿದ್ಧನಿಲ್ಲ. ಓಡಿದೆ ಪಕ್ಕದ ಮನೆಗೆ. ಒಂದೆರಡು ಬೆಂಕಿ ಕಡ್ಡಿ ಕೇಳಿ ತಂದೆ. ನನ್ನವಳಿಗೆ ಗುಟ್ಟು ಗೊತ್ತಾಗಿರಬೇಕು. 'ಸೀಮೆಣ್ಣೆ ಬುಡ್ಡಿ ಉರಿಸಿಟ್ಟು ಒಲೆ ಉರಿಸುವುದು ಸುಲಭ ಇತ್ತು' ಎಂದಳು. ಎಂಥ ಎಕನಾಮಿಕ್ಸ್ ಸಲಹೆ, ನನಗದು ಹೊಳೆಯಲಿಲ್ಲ ಎಂದೆನಿಸಿದರೂ 'ನೀನಲ್ಲಿ ಸುಮ್ಮನೆ ಕೂಡು. ನನಗೆ ಹೇಳಲಿಕ್ಕೆ ಬರಬೇಡ. ಬೇಯಿಸಿದ ಮೇಲೆ ಬಕಾಸುರನ ಹಾಗೆ ತಿನ್ನಲಿಕ್ಕೆ ಬಾ' ಎಂದೆ. 'ತಿಂಗಳಲ್ಲಿ ಮೂರುದಿನ ಮಾತ್ರ ತಾನೆ?' ಎಂದು ಓರೆಗಣ್ಣಿನಲ್ಲಿ ನೋಡಿದಳು. ಉಳಿದ ದಿನಗಳಲ್ಲಿ ಹಾಗೆ ತಿನ್ನುವವರು ನೀವೇ ಎಂಬಂತಿತ್ತು ಆ ನೋಟ.

ಸೀಮೆಣ್ಣೆ ಬುಡ್ಡಿ ಉರಿಸಿಟ್ಟು ಪ್ರಯತ್ನಿಸಿದರೂ ಸೌದೆಗೆ ಬೆಂಕಿ ತೆಗೆದುಕೊಳ್ಳಲಿಲ್ಲ. ಒಲೆಯ ಮೇಲೆ ನೀರಿನ ಪಾತ್ರೆಯಿರಿಸಿ ಪ್ರಯತ್ನ ಮುಂದುವರೆಸಿದೆ. ನಿನ್ನೆಯ, ಮೊನ್ನೆಯ ಓದಿ ಮುಗಿದ ಪತ್ರಿಕೆಗಳನ್ನು ತಂದೆ. ಭೂಕೈಲಾಸದಲ್ಲಿ ರಾವಣ ಶಿವನನ್ನೊಲಿಸಲು ಒಂದೊಂದೇ ಕೈಯನ್ನು ಕತ್ತರಿಸಿ ಹೋಮಕ್ಕೆ ಅರ್ಪಿಸಿದ ಹಾಗೆ ಚೂರು ಚೂರು ಮಾಡಿ ಸುಟ್ಟು ಮುಗಿಸಿದೆ. ಪತ್ರಿಕೆಗಳಿಂದ ಮರಳಿ ಬಂದ ಕತೆ, ಕವನಗಳ ಕಟ್ಟು ನೆನಪಿಗೆ ಬಂತು. ಗುಣಾಢ್ಯ ಕಥಾ ಸರಿತ್ಸಾಗರದ ಪುಟಗಳನ್ನು ಬೆಂಕಿಗೆ ಸಮರ್ಪಿಸಿದುದನ್ನೇ ನೆನೆಸಿಕೊಳ್ಳುತ್ತಾ ಈ ಇಡೀ ಕಟ್ಟನ್ನು ಸಾರ್ಥಕವಾಗಿ ಬಳಸಿದೆ.

ಇನ್ನು ಈ ಪ್ರಯತ್ನ ಆಗುವುದಿಲ್ಲ ಅಂತ ಗೊತ್ತಾಯಿತು. ಗೋಡ್ಖಿಂಡಿಯವರ ಬಾನ್ಸುರಿಯಂತಿರುವ ದೊಡ್ಡ ಪೈಪು ತಂದು ಫೂಂ ಫೂಂ ಎಂದು ಒಲೆ ಊದಲು ಮುಂದಾದೆ. ಈ ಸಾಹಸದಲ್ಲಿ ಪೈಪು ಒಲೆಯಲ್ಲಿದ್ದ ಪಾತ್ರೆಗೆ ತಗುಲಿ ಪಾತ್ರೆ ಬೋರಲಾಗಿ ಅದರಲ್ಲಿದ್ದ ನೀರೆಲ್ಲ ಭಗೀರಥನಿಗೊಲಿದ ಭಾಗೀರಥಿಯ ಹಾಗೆ ಒಲೆಗೆ ಬಿದ್ದು ಸೌದೆಯನ್ನೆಲ್ಲ ನೆನೆಸಿತು. ಅಗಸ್ತ್ಯನ ಕಮಂಡಲುವಿನಿಂದ ಕಾವೇರಿ ನದಿ ಹರಿದಂತೆ ಅಡುಗೆ ಕೋಣೆಯಲ್ಲಿಡೀ ತೀರ್ಥಕ್ಷೇತ್ರವಾಯಿತು.

ನನ್ನ ಚಲನವಲನಗಳ ಮೇಲೆ ಒಂದು ಕಣ್ಣಿರಿಸಿ ನೋಡುತ್ತಲೇ ಇದ್ದ ಹೃದಯವಲ್ಲಭೆ, 'ಅಯ್ಯೋ ರಾಮಾ, ಇದೇನು ಸ್ನಾನಕ್ಕೆ ಬೇಕಾದಷ್ಟು ನೀರಿಟ್ಟಿದ್ದೀರಾ? ನಮಗಿಬ್ಬರಿಗೆ ಕಾಫಿಗೆ ಒಂದೆರಡು ಲೋಟ ನೀರು ಸಾಕಾಗುತ್ತಿತ್ತಲ್ಲ' ಎಂದು ತಲೆ ಚಚ್ಚಿಕೊಂಡು ಸಣ್ಣಗಿನ ದನಿಯಲ್ಲಿ 'ಇನ್ನು ಒಲೆ ಉರಿಯಲಿಕ್ಕೇ ಇಲ್ಲ. ಸೀಮೆಣ್ಣೆ ಸ್ಟೌವಿಗೆ ಬೆಂಕಿ ಮಾಡುವುದೇ ಒಳ್ಳೆಯದು' ಎಂಬ ಸಲಹೆ ನೀಡಿದಳು.

ಸಂದಿಗೊಂದಿಗಳಲ್ಲಿ ಹುಡುಕಿ, ತಲೆಗೆ ಜೇಡನಬಲೆ ಹತ್ತಿಸಿಕೊಂಡು ಯಾವುದೋ ಮ್ಯೂಸಿಯಂಗೆ ಕೊಡಲು ತಕ್ಕ ಯೋಗ್ಯತೆ ಪಡೆದಿದ್ದ ಸ್ಟೌ ಹುಡುಕಿ ತಂದೆ. ಪಂಪು ಮಾಡುವುದು, ಬೆಂಕಿ ಕಡ್ಡಿಗೀರಿ ಒಡ್ಡುವುದು. ಇದನ್ನೆಷ್ಟು ಸಲ ಮಾಡಿದರೂ ಅದು ಉರಿಯಲಿಲ್ಲ. ಕೋಪದಲ್ಲಿ ಹೊರಗೆ ತಂದೆ. ಅವಳ ಮುಂದೆ ಕುಕ್ಕಿದೆ. 'ಹೊರಗೆ ಕುಳಿತು ಜೇಠ್ಮಲಾನಿಯ ಹಾಗೆ ವಕೀಲಿ ಸಲಹೆ ಕೊಟ್ಟರೆ ಮುಗಿಯಿತಾ? ಇದನ್ನು ಹಾಳು ಮಾಡಿ ಮೂಲೆಗೆ ಸೇರಿಸಿದರೆ ಉರಿಯುವುದಾದರೂ ಹೇಗೆ ಅಂತ ಬೇಕಲ್ಲ. ನಿನ್ನ ಕೈಗೆ ಚಿಂತಾಮಣಿ ತಂದುಕೊಟ್ಟರೂ ಅದು ಬರೇ ಗಾಜಿನ ಹಾಗಾದೀತು' ಎಂದು ಅವಳ ಜನ್ಮ ಜಾಲಾಡಿಸಿದೆ.

ಸ್ಟೌವನ್ನು ಪರೀಕ್ಷಿಸಿದಳು. ಮುಟ್ಟಿದ ತಕ್ಷಣ ರೋಗದ ಅರಿವು ಮೂಡಿದ ವೈದ್ಯನ ಹಾಗೆ ಅವಳಿಗೊಂದು ನಗು ಬಂತು. 'ಅಲ್ಲಾಂದ್ರೆ ಎಲ್ಲದರಲ್ಲೂ ಗಡಿಬಿಡಿ ಮಾಡಿದರೆ ಆಗುತ್ತದಾ? ಇದರಲ್ಲಿ ಒಂದು ಹನಿ ಕೂಡ ಸೀಮೆಣ್ಣೆ ಇಲ್ಲ. ಮತ್ತೆ ಉರಿಯೋದು ಹೇಗೆ?' ಎಂದು ಅಲ್ಲಾಡಿಸಿ ತೋರಿಸಿದಳು.

ನನ್ನ ತಲೆಗದು ಹೊಳೆಯಲಿಲ್ಲ ಅಂತ ಒಪ್ಪಿಕೊಂಡರೆ ಪಡಪೋಶಿ ಆಗುತ್ತೇನಲ್ಲ. 'ತಪ್ಪು ನಿನ್ನದೇ. ಸ್ಟೌವಿನಲ್ಲಿ ತುಂಬ ಎಣ್ಣೆ ತುಂಬಿಸಿ ಇಡಬೇಕಾದ್ದು ನಿನ್ನ ಕರ್ತವ್ಯ. ನಿನಗೀಗ ಕಾಫಿ ತಯಾರಾದರೆ ಕೊಳಗ ತುಂಬ ಕುಡಿದೇನು ಅನ್ನುವ ಆಶೆ ಇರಬಹುದು. ನನಗೇನು, ಇಲ್ಲೇ ಬಿಟ್ಟು ಯಾರ ಮನೆಗಾದ್ರೂ ಎದ್ದು ಹೋದೇನು. ಉಪವಾಸ ಬಿದ್ದು ಸಾಯುವುದು. ನೀನೇ' ಎಂದು ಅವಳನ್ನೇ ಕಾರಣ ಮಾಡಿದೆ.

ಮತ್ತೆ ಸ್ಟೌವನ್ನು ಒಳಗೆ ತಂದೆ. ಅದರ ಬಾಯಿಯೊಳಗೆ ಲಾಳಿಕೆ ತೂರಿಸಿ ಡಬ್ಬದಲ್ಲಿದ್ದ ಸೀಮೆಣ್ಣೆ ತುಂಬಿಸುವ ಕೆಲಸ ಮಾಡಿದೆ. ಎಷ್ಟು ಎಣ್ಣೆ ತುಂಬಿಸಿದರೂ ಗುಳುಂ ಗುಳುಂ ಅಂತ ನುಂಗುತ್ತಿತ್ತೇ ವಿನಾ ಭರ್ತಿಯಾಗುವ ಲಕ್ಷಣವಿಲ್ಲ. ಹೊರಗಿನಿಂದ ಇವಳು, 'ಸೀಮೆಣ್ಣೆ ನೆಲಕ್ಕೆ ಚೆಲ್ಲಿದಿರೋ ಹೇಗೊ ಮನೆಯಿಡೀ ವಾಸನೆ ಬರ್‍ತಾ ಇದೆ' ಎಂದಳು. 'ನಿನ್ನ ತಲೆ. ಇದರ ಹೊಟ್ಟೆ ಸರಕಾರಿ ಗೋದಾಮಿನ ಹಾಗೆ ದೊಡ್ಡದಿದೆ. ಡಬ್ಬ ಖಾಲಿಯಾದ್ರೂ ಅದನ್ನು ತುಂಬಿಲ್ಲ' ಎನ್ನುತ್ತ ಸೀಮೆಣ್ಣೆ ಬುಡ್ಡಿ ಹತ್ತಿರಕ್ಕೆ ತಂದು ಪರೀಕ್ಷಿಸಿದರೆ ಇಡೀ ಕೋಣೆಯಲ್ಲಿ ಸೀಮೆಣ್ಣೆ ಹರಿಯುತ್ತಾ

ಇದೆ. ಸ್ಟೌವಿನ ತಳಭಾಗ ರಂಧ್ರವಿದ್ದುದು ಗಮನಕ್ಕೆ ಬಂದಿರಲಿಲ್ಲ. ಮೇಲಿನಿಂದ ಹೊಯಿದ ಹಾಗೆಯೇ ತಳದಿಂದ ಹೊರಗೆ ಹರಿದು ಇಡೀ ಅಡುಗೆಮನೆಯನ್ನು ಕುವೈತಿನ ಎಣ್ಣೆ ಬಾವಿಯ ಹಾಗೆ ಮಾಡಿತ್ತು.

ಕುರುಕ್ಷೇತ್ರ ಯುದ್ಧದಲ್ಲಿ ಊರ್ಧ್ವ ಬಾಹುವಿನ ತಲೆ ಕಂಬದ ಮೇಲೆ ಕುಳಿತು ಇಡೀ ಯುದ್ಧವನ್ನು ವೀಕ್ಷಿಸಿದ ಹಾಗೆ ನನ್ನ ನಡವಳಿಕೆಯನ್ನು ಗಮನಿಸುತ್ತಲೇ ಇದ್ದಳಲ್ಲ ಮಾಟಗಾತಿ. 'ರ್ರೀ, ನೆಲದಲ್ಲಿರುವ ಎಣ್ಣೆಯಲ್ಲಿ ಸೌದೆಯನ್ನು ಮುಳುಗಿಸಿ ಒಲೆಗಿಡಿ. ಬೆಂಕಿ ಹತ್ತಿಕೊಳ್ಳುತ್ತೆ' ಎಂದು ಫರ್ಮಾನು ಹೊರಡಿಸಿದಳು. ಅವಳಿಗಿದ್ದ ಬುದ್ಧಿವಂತಿಕೆಯ ಲವಲೇಶವಾದರೂ ನನಗಿರುತ್ತಿದ್ದರೆ!

ಅವಳ ಸಲಹೆಗೆ ಒಂದು ಥ್ಯಾಂಕ್ಸ್ ಹೇಳಿ ಅವಳನ್ನೇ ಗ್ರೇಟ್ ಎಂದು ಒಪ್ಪಿಕೊಳ್ಳಲು ನನಗೆ ಇಷ್ಟವಿರಲಿಲ್ಲ. ಮೌನವಾಗಿ ಇದೇ ವಿಧಾನದಿಂದ ಒಲೆ ಉರಿಸಿದೆ. ಈಗ ಲೆಕ್ಕಾಚಾರ ಮಾಡಿ ಪಾತ್ರೆಯಲ್ಲಿ ನೀರನ್ನಿರಿಸಿ ಕುದಿಸಿದೆ. ಇಳಿಸುವಾಗ ಒಂದು ಬಟ್ಟೆ ಹಿಡಿದು ಕೊಳ್ಳಬೇಕೆಂಬ ಪ್ರಜ್ಞೆಯಿಲ್ಲದೆ ಬಿಸಿ ಪಾತ್ರೆ ಹಿಡಿಯಲು ಹೋಗಿ 'ಹಾಯ್ ಹಾಯ್' ಎಂದೆ. 'ಯಾರಿಗೆ ವಿಷ್ ಮಾಡ್ತಿದೀರಾ?' ಎಂಬ ಅವಳ ಪ್ರಶ್ನೆಗೆ ಗಾಯದ ಮೇಲೆ ಉಪ್ಪು ಸವರಿದಂತೆ ರೇಗಿಬಿಟ್ಟಿದ್ದೆ.

ಅಂತೂ ಲೋಟಕ್ಕೆ ಕಾಫಿ ಪುಡಿ ಹಾಕಿ ನೀರು ಎರೆದು ಸೋಸಿ ಸ್ಟ್ರಾಂಗ್ ಸಾಕೋ ಎಂದು ಪರೀಕ್ಷಿಸಲು ತೆಗೆದುಕೊಂಡು ಬಂದು ಹೆಂಡತಿಯ ಮುಂದಿರಿಸಿದೆ. ಮೂಸಿ ನೋಡಿ ಮುಖ ಸಿಂಡರಿಸಿದಳು. 'ಕೈ ತೊಳೆದುಕೊಳ್ಳದೆ ನೀರಿಟ್ಟಿದ್ದೀರಿ ಅನ್ಸುತ್ತೆ. ಸೀಮೆಣ್ಣೆ ವಾಸ್ನೇಲಿ ಕುಡಿಯಾಕೆ ಆಗ್ತಿಲ್ಲ' ಎಂದು ಕಮೆಂಟ್ಸ್ ಮಾಡಿದಳು. 'ಹೌದೌದು. ನಿನಗೀಗ ಎಲ್ಲ ವಾಸನಾಬಲವೂ ಜಾಗೃತವಾಗುತ್ತಿದೆ. ದಿನನಿತ್ಯ ನಿನ್ನ ಅಡಿಗೆಯಲ್ಲಿ ಜಿರಳೆ ಹಿಕ್ಕೆ, ತಲೆಕೂದಲು ಇವೆಲ್ಲ ತರಾವರಿ ಸಿಕ್ಕುತ್ತಿದ್ದರೂ ಕಮಕ್ ಕಿಮಕ್ ಎನ್ನದೆ ನಾನು ನುಂಗ್ತಿದೀನಿ. ನಾನೇನು ಮಾಡಿದರೂ ಅದರಲ್ಲಿ ಕೊರತೆ' ಎಂದೆ. ನಾನೇ ಕುಡಿದು ಅದರ ಸಾಚಾತನವನ್ನು ಪ್ರದರ್ಶಿಸಲು ಮುಂದಾದೆ. ಆದರೆ ಒಂದೇ ಒಂದು ಹನಿ ಗಂಟಲಲ್ಲಿ ಇಳಿಯಲಿಲ್ಲ. ಸೀಮೆಣ್ಣೆಯ ವಾಸನೆ ನಾಲಗೆಯನ್ನೇ ಸುಟ್ಟುಬಿಟ್ಟಿತ್ತು. ಆದರೂ ಒಪ್ಪಿಕೊಳ್ಳಲಿಲ್ಲ. ಅವಳ ಒತ್ತಾಯಕ್ಕೆಂಬಂತೆ ಕೈ ತೊಳೆದುಕೊಂಡು ಬಂದು ಪ್ರತ್ಯೇಕ ನೀರು ಕುದಿಸಿದೆ.

ಈ ಸಲ ಹಾಲು, ಸಕ್ಕರೆ ಎಲ್ಲ ಸೇರಿಸಿ ಕಾಫಿ ತಯಾರಿಸಿ ಸರಿಯಾಗಿದೆಯೋ ಎನ್ನುವ ಐಎಸ್‌ಐ ಮುದ್ರೆ ಒತ್ತಿಸಿಕೊಳ್ಳಲು ಪರಿಶೀಲನೆಗಾಗಿ ಅವಳ ಮುಂದೆ ತಂದು ಕುಕ್ಕಿದೆ. ರುಚಿ ನೋಡಿದಳು. ದಶಮೂಲ ಕಷಾಯ ಕುಡಿದ ಹಾಗಾಯಿತು ಮುಖ. 'ಈ ಸಲದ ಕಾಫಿ ಪುಡಿ ಚೆನ್ನಾಗಿಲ್ಲ ಅನ್ಸುತ್ತೆ. ತಂಬಾಕಿನ ವಾಸನೆ ಇದೆ' ಎನ್ನುತ್ತ ಹೊರಗೆ ಓಡಿ ಕಾರಿಕೊಂಡಳು. ತಲೆಗೆ ಫ್ಲಾಷ್ ಆಯಿತು. ಅಮ್ಮ ಅಡುಗೆಮನೆಯಲ್ಲಿ ತನ್ನ ನಶ್ಯದ ಡಬ್ಬಿ ಇರಿಸಿದ್ದರು. ಕಾಫಿ ಪುಡಿ ಅಂದ್ಕೊಳ್ತಾ ನಾಲ್ಕು ಚಮಚ ನಶ್ಯವನ್ನೇ ಹಾಕಿದ್ದೇನೆಂಬುದು ಬುದ್ಧನಿಗಾದಂತೆ ಜ್ಞಾನೋದಯವಾಯಿತು.

ಮರಳಿ ಯತ್ನವ ಮಾಡು, ಅಡಿಯ ಮುಂದಿಡೆ ಸ್ವರ್ಗ. ಅಡಿಗೆ ಮನೆಯೇ ನನಗಿಂದು ಸ್ವರ್ಗ ಅಂದ್ಕೊಳ್ತಾ ಮತ್ತೊಮ್ಮೆ ನೀರು ಕುದಿಸಿ, ತುಂಬ ಎಚ್ಚರಿಕೆಯಿಂದಲೇ ಕಾಫಿ ತಯಾರಿಸಿದೆ. ಮೊದಲು ಅವಳಿಂದಲೇ ಅಭಿಮತ ಸಂಗ್ರಹ ಮಾಡಲು ನಿರ್ಧರಿಸಿ

ಲೋಟದಲ್ಲಿ ತುಂಬಿಸಿ ತಂದೆ. ರುಚಿ ನೋಡಿದಳು. 'ಕಾಫಿ ಚೆನ್ನಾಗಿದೇರಿ' ಎಂದಳು. 'ಆದ್ರೆ ನಿಮಗೆ ಸ್ವಲ್ಪ ಸ್ಟ್ರಾಂಗ್ ಕಡಿಮೆ ಅನಿಸೀತು. ನಾಲ್ಕು ಚಮಚ ಕಾಫಿ ಪುಡಿಯಿಂದ ಡಿಕಾಕ್ಷನ್ ತಯಾರಿಸಿ ಒಂದು ಲೋಟಕ್ಕೆ ಸೇರಿಸಿ. ಹಾಗೆಯೇ ನಿಮಗೆ ಸಿಹಿ ಹೆಚ್ಚು ಬೇಕಲ್ಲ, ಎರಡು ಚಮಚ ಸಕ್ಕರೆ ಇದ್ದರೆ ಒಳ್ಳೆಯದು. ಇಷ್ಟು ಸೇರಿಸುವಾಗ ಹಾಲು ಕಮ್ಮಿಯಾದ್ರೆ ಕುಡಿಯೋಕಾಗೋದಿಲ್ಲ. ಅರ್ಧ ಲೋಟ ಹಾಲೂ ಇರಲಿ' ಎನ್ನುವ ಸಲಹೆ ಸೂಚನೆಗಳನ್ನು ನೀಡುವುದರ ಮೂಲಕ ಕಾಫಿಯ ಗುಣಮಟ್ಟದ ದೃಢೀಕರಣ ನೀಡಿದಳು.

ಒಳಗೆ ಬಂದು ನಾನೂ ಒಂದೆರಡು ಹನಿ ಕುಡಿದು ನೋಡಿದೆ. ನಿಜಕ್ಕೂ ನೀರಿನದೇ ರುಚಿ ಬಿಟ್ಟರೆ ಇನ್ನೇನೂ ಇರಲಿಲ್ಲ ನನ್ನ ಕಾಫಿಯಲ್ಲಿ. ಅಂತೂ ಅವಳದೇ ಸೂಚನೆಗಳನ್ನು ಅನುಸರಿಸಿ ಕಾಫಿ ತಯಾರಿಸಿ ಕುಡಿದೆ. ಅವಳಿಗೂ ಕೊಟ್ಟೆ, ಭೇಷ್ ಎಂದು ಹೊಗಳಿಸಿಕೊಂಡೆ. 'ಮಧ್ಯಾಹ್ನಕ್ಕೆ ಏನು ಅಡಿಗೆ ಮಾಡ್ತೀರಾ? ಒಂದು ಪಲ್ಯ ಇಲ್ಲದೆ ನಿಮಗೆ ಊಟ ಸೇರೋದಿಲ್ಲ. ಹುರುಳಿಕಾಯಿ ತಂದು ಕೊಟ್ಟರೆ ನಾರು ತೆಗೆದು ಹೆಚ್ಚಿ ಕೊಡ್ತೀನಿ. ಟೊಮಾಟೊ ಸಾರು ಮಾಡಿ. ಸಾಂಬಾರು ಇಲ್ಲದಿದ್ರೆ ಯಾವಾಗಲೂ ರೇಗ್ತೀರಲ್ಲ. ಯಾವ ತರಕಾರಿ ಸಾಂಬಾರಿಗೆ ಸಿದ್ಧ ಮಾಡಲಿ?' ಕೇಳಿದಳು.

'ಇವತ್ತು ತುಂಬ ಬರೆಯಲಿಕ್ಕಿದೆ ಕಣೇ. ಸಾರು, ಸಾಂಬಾರು, ತಯಾರಿಗೆ ಬಿಡುವೇ ಇಲ್ಲ. ಖಾಲಿ ಅನ್ನ ಮಾತ್ರ ಮಾಡ್ತೀನಿ. ಉಪ್ಪಿನಕಾಯಿ, ಮೊಸರು ಇದ್ರೆ ಅದೇ ಬರೋಬರಿ' ಎಂದೆ. ನನಗೆ ಅವನ್ನು ಮಾಡಲು ಬರೋದಿಲ್ಲ. ಈಗಾಗಲೇ ಸುಸ್ತಾಗಿದ್ದೇನೆ ಅಂತ ಹೇಳಲು ಮನವೊಲ್ಲದೆ ಒಲೆಗೆ ಅನ್ನದ ಪಾತ್ರೆ ಏರಿಸಿಟ್ಟೆ. ಇನ್ನೂ ಆ ದಿನದ ಪತ್ರಿಕೆ ಬಿಡಿಸಿರಲಿಲ್ಲ. ಅಧಿಕಾರ ಹಸ್ತಾಂತರದ ಬಗ್ಗೆ ಓದುತ್ತಿದ್ದೆ. ಒಳಗಿನಿಂದ ಸಣ್ಣದಾಗಿ ಚಿಟಿ ಚಿಟಿ ಅನ್ನುವ ಸದ್ದು ಬರುತ್ತಾ ಇದ್ದರೂ ಆ ಕಡೆಗೆ ಗಮನ ಹರಿಸಿರಲಿಲ್ಲ. ನನ್ನವಳು, 'ಏನ್ರೀ, ಸೀದು ಹೋದ ವಾಸ್ನೆ ಬರ್ತಾ ಇದ್ದೆ. ಅನ್ನಕ್ಕೆ ನೀರಿಡುವಾಗ ತುಂಬ ಕಡಿಮೆ ನೀರು ಇಟ್ಟಿರುವ ಹಾಗಿದೆ' ಎಂದು ಕೂಗಿಕೊಂಡಳು.

ಒಳಗೆ ಧಾವಿಸಿ ನೋಡಿದರೆ ಅನ್ನದ ಪಾತ್ರೆಯಲ್ಲಿ ನೀರೆಲ್ಲ ಆರಿ, ಸೀದು ಹೋಗಿತ್ತು. ಹಳೆಯ ಗ್ರಾಮಾಫೋನ್ ತಟ್ಟೆಯ ಹಾಗೆ ಆಗಿತ್ತು ಪಾತ್ರೆಯಲ್ಲಿ ತಳ ಹಿಡಿದು ಕಪ್ಪಾದ ಅನ್ನ.

ಅಷ್ಟರಲ್ಲಿ ಹಲೋ ಎನ್ನುತ್ತ ಹಳೆಯ ಗೆಳೆಯನೊಬ್ಬ ಹೆಂಡತಿ ಮಕ್ಕಳ ಸಹಿತ ಬಿಜಯಂಗೈದ. ಅವನ ಠೀವಿ ನೋಡಿದರೆ ಎರಡು ದಿನ ಝೂಂಡಾ ಊರುವುದರಲ್ಲಿ ಅನುಮಾನವಿಲ್ಲ. ಹೆಂಡತಿಯ ಬಳಿಗೆ ಧಾವಿಸಿದೆ. 'ನಾನಿಲ್ಲಿ ಅಡುಗೆ ಮಾಡ್ತಾ ಕುಳಿತರೆ ಅಪರೂಪಕ್ಕೆ ಬಂದವನಿಗೆ ಬೋರ್ ಅನಿಸೋದಿಲ್ವಾ? ಅಮ್ಮ ಹೇಗೂ ನಾಲ್ಕಾರು ದಿನ ಬರುವುದಿಲ್ಲ. ಅಡುಗೆ ನೀನೇ ಮಾಡು. ಈ ವಿಷಯ ಅಮ್ಮನಿಗಾಗಲಿ ಬಂದವರಿಗಾಗಲಿ ಗೊತ್ತಾಗದಿದ್ರೆ ಸಾಕು' ಎಂದು ಆಜ್ಞೆಮಾಡಿದೆ.

ಮೂರು ದಿನ ಹೇಗಪ್ಪಾ ಅಂದ್ಕೊಂಡವನಿಗೆ ಆಪತ್ಬಾಂಧವನಂತೆ ಬಂದಿದ್ದ ಗೆಳೆಯ ಸಂಕಷ್ಟದಿಂದ ಪಾರು ಮಾಡಿ ಪಾಕ ಪರಾಕ್ರಮಕ್ಕೆ ತಡೆ ಹಾಕಿ ಬಿಟ್ಟ.

ನಮ್ಮ ಮನೆಯ ಬ್ಬಟನಬೆ.

- ಚಿತ್ರ ರಾಮಚಂದ್ರನ್

ಮಗನ ಊರಲ್ಲಿ ಕಾಲಿಟ್ಟಾಗ ಕಂಡ ದೃಶ್ಯಗಳೆಲ್ಲ ಬೆರಗುಗೊಳಿಸಿದವು. ತಣ್ಣನೆಯ ಹವಾಮಾನ, ನಂದನವನದಂತಹ ಪರಿಸರ, ನುಣ್ಣನೆಯ ಸ್ವಚ್ಛಂದವಾದ ರಸ್ತೆಯಲ್ಲಿ ಕಾರು ಚಲಿಸಿದ ವೇಗ ಎಲ್ಲ ಹೊಚ್ಚ ಹೊಸತಾಗಿತ್ತು.

''ಆದಿ! ಸ್ವಲ್ಪ ನಿಧಾನ ಮಾಡೋ! ಆ ಪರ್ವತವನ್ನ ಸ್ವಲ್ಪ ಸೆರೆ ಹಿಡ್ಕೊತೀನಿ.''

ಹೋಗಹೋಗುತ್ತ ಜೊತೆಜೊತೆಯಲ್ಲೇ ಕಂಡು ಬರುತ್ತಿದ್ದ ಹಿಮ ಕವಿದ ಪರ್ವತದತ್ತ, ತನ್ನ ಮೊಬೈಲನ್ನ ತಿರುಗಿಸುತ್ತ ಇವರು ಹೇಳಿದರು. ''ಇಲ್ಲೆಲ್ಲ ನಿಧಾನಿಸಕ್ಕಾಗಲ್ಲಪ್ಪ. ಹಿಂದೆ ಬರೋ ಕಾರು ಡಿಕ್ಕಿ ಹೊಡೆಯುತ್ತೆ. ಆಮೇಲೆ ಹೆಲಿಕಾಪ್ಟರಲ್ಲಿ ಕಾಪ್ಸ್ ಬರ್ತಾರೆ..''

ಚಿಕ್ಕಂದಿನಲ್ಲಿ ಗುಮ್ಮ ಬರುತ್ತಾನೆ ಎಂದು ನಾವು ಬೆದರಿಸಿ ಬೆಳೆಸಿದ್ದ ಮಗ, ಈಗ ಅಪ್ಪನಿಗೆ ಹೆಲಿಕಾಪ್ಟರಲ್ಲಿ ಕಾಪ್ಸ್ ಬರುತ್ತಾರೆಂದು ಹೇಳಿದ್ದು ಕೇಳಿ ನನಗೆ ನಗು ಬಂದಿತು.

''ಎಷ್ಟು ಒಳ್ಳೆ ವ್ಯೂ. ಹೇಗೋ ಬಿಡೋದು?'' ಇವರಿಗಂತೂ ಸಮಾಧಾನ ಇಲ್ಲ.

ಚೂಪಾದ ಶಿಖರದಿಂದ ಒಂದೇ ಸಮನೆ ಪಕ್ಕಗಳಲ್ಲಿಳಿದು ನೆಲದಲ್ಲಿ ಊರಿ ನಿಂತಿದ್ದು ಮಕ್ಕಳು ಬಿಡಿಸೊ ತ್ರಿಕೋನಾಕಾರದ ಬೆಟ್ಟದ ಚಿತ್ರದಂತೆ ಕಂಡಿತು, ಮೌಂಟ್ ಹುಡ್.

''ಅಪ್ಪ, ಜೀವಂತವಿರೋ ಈ ಜ್ವಾಲಾಮುಖಿ ಪೋರ್ಟ್‌ಲ್ಯಾಂಡ್‌ನಲ್ಲಿ ಎಲ್ಲಿನಿಂತು ನೋಡಿದ್ರೂ ಕಾಣತ್ತೆ. ಇದರ ಸುಂದರ ದೃಶ್ಯಕ್ಕಾಗಿ, ಇಲ್ಲಿ ಎತ್ತರದ ಕಟ್ಟಡಗಳನ್ನ ಕಟ್ಟಕ್ಕೆ ತಡೆ ಹಾಕಿದ್ದಾರೆ. ಇಲ್ಲಿಯ ಜನರ ರಸಿಕತೆಗೆ ಏನಂತಿಯ?''

ನನ್ನ ಹೊಟ್ಟೆ ಬಾಯಿಗೆ ಬಂದಂತಾಯಿತು. ಹೆತ್ತು, ಹೊತ್ತು ಬೆಳಸಿ, ನನ್ನ ಕಂದನನ್ನ ಒಂದು ಸಜೀವ ಜ್ವಾಲಾಮುಖಿಯ ಪಾದಕ್ಕೆ ಸೇರಿಸಿದೆವಲ್ಲ, ನನ್ನ ಕರುಳು ಕಂಪಿಸಿತು. ಮರುಕ್ಷಣವೇ, ತಂತ್ರಜ್ಞಾನದ ತುತ್ತ ತುದಿಯನ್ನೇರಿರುವ ಈ ಇಪ್ಪತ್ತೊಂದನೆಯ ಶತಮಾನದಲ್ಲಿ, ಅದ್ರಲ್ಲೂ ಹತ್ತು ಲಕ್ಷ ಜನ ವಾಸವಾಗಿರೋ ಈ ಪೋರ್ಟ್‌ಲ್ಯಾಂಡಿನಲ್ಲಿ ನನ್ನ ಮಗನಿಗೆ ಮಾತ್ರ ಏನು ಅಪಾಯ ಸಂಭವಿಸಿ ಬಿಡುವುದು, ಎಂದು ನನ್ನ ಬುದ್ಧಿ ಸಮಾಧಾನ ಹೇಳಿತು.

ಇವರಂತೂ ಆ ರುದ್ರ ಸೌಂದರ್ಯವನ್ನ ಹೇಗಾದರೂ ತನ್ನ ಮೊಬೈಲಲ್ಲಿ ಹಿಡಿದುಹಾಕಿಕೊಳ್ಳುವ ಪ್ರಯತ್ನದಲ್ಲೇ ಇದ್ದರು.

ಪ್ರಯಾಣದ ಆಯಾಸ ತೀರುವತನಕ ಸುಧಾರಿಸಿಕೊಂಡ ಮೇಲೆ ಮೊದಲನೆಯ ಕೆಲಸವಾಗಿ ಮಗ ಸೊಸೆ ಇಬ್ಬರೂ ನಮ್ಮನ್ನ ಎಲೆಕ್ಟ್ರಾನಿಕ್ ಅಂಗಡಿಗಳಿಗೆ ದಿಗ್ವಿಜಯ ಮಾಡಿಸಿದರು. ಅನೇಕ ಅಂಗಡಿಗಳನ್ನ ಜಾಲಾಡಿ ಕೊನೆಗೆ ಒಂದು ಕ್ಯಾಮರಾವನ್ನ ಇವರಿಗೆ ಕೊಡಿಸಿದರು.

''ಆಲ್ ದಿ ಬೆಸ್ಟ್ ಅಪ್ಪ. ಇನ್ನು ನೀನು ಬೇಕಾದ್ದಾಗೆ ಬ್ಬಟನಬೆ ಮಾಡ್ಬೋದು. ನಿನ್ನ

ಬ್ವಟನಬೆ ಪಯಣ ಸುಗಮವಾಗಿರಲು ಅಭಿನಂದನೆಗಳು.'' ಹೇಳುತ್ತಲೇ ಇವರ ಕೈಕುಲುಕಿದ ಮಗನನ್ನು ನಾನು ಪ್ರಶ್ನಾರ್ಥವಾಗಿ ನೋಡಿದೆ.

''ಜಪಾನೀ ಯಾತ್ರಿಕರನ್ನು ಗಮನಿಸಿದ್ದೀಯ ಅಮ್ಮ? ಸದಾ ಹೆಗಲ್ಮೇಲೆ ಕ್ಯಾಮರಾ ಜೋತು ಬಿದ್ದಿರತ್ತೆ. ಒಂದು ಹುಳು, ಹುಲ್ಲು, ಕಡ್ಡಿ ಬಿಡ್ದೆ ಎಲ್ಲ ಫೋಟೋ ತೆಗೀತಿರ್ತಾರೆ. ನಮ್ಮೂರಲ್ಲಿ ರಾಮುಹಾಗೆ ಅಲ್ಲಿ ಬ್ವಟನಬೆಗಳು ಹೆಚ್ಚು. ನಮ್ಗೆ ಎಲ್ಲ ಜಪಾನೀ ಟೂರಿಸ್ಟುಗಳು ಬ್ವಟನಬೆಗಳೇ. ಫೋಟೋ ತೆಗೆಯೋ ವ್ಯಾಮೋಹವಿದ್ದವರೆಲ್ಲ ಬ್ವಟನಬೆಗಳೇ. ಈ ನಾಮಪದವನ್ನ 'ಬ್ವಟನಬೆ ಮಾಡು' ಅಂತ ಕ್ರಿಯಾಪದದಲ್ಲೂ ಉಪಯೋಗಿಸ್ತೀವಿ..''

ಈ ಯುವಕರಂತೂ ಅದೆಷ್ಟು ಹೊಸ ಹೊಸ ಪದಗಳನ್ನೂ ಭಾಷೆಗಳನ್ನೂ ಹುಟ್ಟು ಹಾಕುತ್ತಾರೆ ಎಂದು ನನಗೆ ಆಶ್ಚರ್ಯವಾಯಿತು.

ನಾನೂ ಮುಗುಳು ನಗುತ್ತ ''ಹ್ಯಾಪಿ ಬ್ವಟನಬೆಯಿಂಗ್.'' ಎಂದು ಹೇಳಿ ಇವರ ಕೈಕುಲುಕಿದೆ.

ಹೊಸ ಕ್ಯಾಮರಾ ಕೈ ಸೇರಿದ ಮೇಲೆ ಇವರ ಕೈ ಸುಮ್ಮನೆ ಇರುತ್ತದೆಯೆ? ಜಗುಲಿಯ ಮೇಲಿದ್ದ ಕುರ್ಚಿಯಲ್ಲಿ ಕುಳಿತು ಸಿಕ್ಕ ಸಿಕ್ಕ ದೃಶ್ಯಗಳನ್ನೂ ಸಿಗದೆ ಇದ್ದ ದೃಶ್ಯಗಳನ್ನೂ ಕೂಡ ಕ್ಲಿಕ್ ಮಾಡಿ ಹೊಸ ಕ್ಯಾಮರಾ ರೂಢಿಸಿಕೊಳ್ಳತೊಡಗಿದರು.

ಮೋಡವಿಲ್ಲದ ನೀಲಿ ಆಕಾಶದಲ್ಲಿ ಸದಾ ಹರಿದಾಡುತ್ತಿದ್ದ ಜೆಟ್ ವಿಮಾನಗಳು, ತೋಟದಲ್ಲಿ ಅರಳಿದ್ದ ಬೊಗಸೆ ಗುಲಾಬಿಗಳು, ಪಕ್ಕದ ಮನೆಯ ದಪ್ಪ ಬೆಕ್ಕು, ಎದುರು ಮನೆಯ ವಿಚಿತ್ರವಾದ ಕುಳ್ಳನಾಯಿ - ''ಇಲ್ನೋಡ್ರಿ, ರಾಬಿನ್ ರೆಡ್ ಬ್ರೆಸ್ಟ್!'' ನಾನು ಉತ್ಸಾಹದಿಂದ ಕೂಗಿದೆ. ಮೊಮ್ಮಗಳಿಗೆ ''ತಂಬಲೀನ'' ಕಥೆ ಓದಿ ಹೇಳಿದಾಗ, ಆ ಪುಸ್ತಕದಲ್ಲಿ ಈ ಪಕ್ಷಿಯ ವರ್ಣ ಚಿತ್ರವನ್ನ ನೋಡಿದ್ದೆ. ಈ ಜೀವಂತ ರಾಬಿನ್ ರೆಡ್ ಬ್ರೆಸ್ಟ್ ಫೋಟೋ ತೆಗೆದು ಬೆಂಗಳೂರಲ್ಲಿದ್ದ ಮಗುವಿಗೆ ತೋರಿಸಿದರೆ ಎಷ್ಟು ಖುಷಿ ಪಡುವಳು ಎನ್ನಿಸಿತು. ಇವರು ಕ್ಲಿಕ್ ಅನ್ನೋ ಹೊತ್ತಿಗೆ ಆ ರಾಬಿನ್ ಪುರ್ರೆಂದು ಹಾರಿ ಹೋಗಿತ್ತು. ನನ್ನ ಉದ್ವೇಗವೆಲ್ಲ ತಣ್ಣಗಾಯಿತು. ''ಮತ್ತೆ ಬರತ್ತೆ ಇರು...'' ಸಮಾಧಾನ ಹೇಳಿ, ಇವರು ಕಾಯತೊಡಗಿದರು. ಸುಮಾರು ಸಮಯ ಕಳೆದ ಮೇಲೆ ನಾಲ್ಕೈದು ರಾಬಿನ್‌ಗಳು ಬಂದು ಹುಲ್ಲು ಹಾಸಿನ ಮೇಲೆ ಕುಳಿತವು. ಚಾಕಲೇಟ್ ಬಣ್ಣದ ತುಪ್ಪಳ ಹೊದ್ದು ಕೆಂಪು ಬಣ್ಣದ ಹೊಟ್ಟೆ ಹೊತ್ತು, ಪುಟ್ಟ ಹಳದಿ ಕೊಕ್ಕಿನಿಂದ ಹುಳು ಹುಡುಕುತ್ತ ಜಿಗಿದಾಡುತ್ತಿದ್ದವು. ಬಹಳ ಹತ್ತಿರಕ್ಕೆ ಬಂದ ಒಂದು ಹಕ್ಕಿಯನ್ನ ಕ್ಲಿಕ್ ಮಾಡಲು ಇವರು ಎದ್ದರು. ಈ ಗಡಿಬಿಡಿಯಲ್ಲಿ ಇವರು ಕುರ್ಚಿ ದೂರ ಸರಿಸಿ ಎದ್ದ ರಭಸಕ್ಕೆ ಆ ಪುಟ್ಟ ರಾಬಿನ್‌ಗಳು ಒಟ್ಟಿಗೆ ಹಾರಿ ಬಿಟ್ಟವು.

ನಿರಾಸೆ ತುಂಬಿದ ನನ್ನ ಮುಖ ನೋಡಿ, ''ಇನ್ನು ಎರಡು ತಿಂಗಳು ಇಲ್ಲೇ ಇರ್ತೀವಿ. ಒಂದಾದರೂ ಫೋಟೋ ತೆಗೀದೆ ಬಿಡಲ್ಲ..'' ಎಂದು ಶಪಥ ಹಾಕಿದರು ಇವರು.

ಸಂಜೆ ಮಗಸೊಸೆ ಆಫೀಸಿನಿಂದ ಹಿಂತಿರುಗಿದರು.

''ಏನು ಇವತ್ತಿನ ಬ್ವಟನಬೆಯ ಸಾಹಸಗಳು?'' ಕೇಳುತ್ತಲೇ ಕುಳಿತ ಮಗನ ಕೈಗೆ ಇವರು ಕ್ಯಾಮರ ಕೊಟ್ಟರು.

ಮಗನ ಅಕ್ಕಪಕ್ಕಗಳಲ್ಲಿ ನಾನೂ ನನ್ನ ಸೊಸೆಯೂ ಕುಳಿತೆವು. ಕ್ಯಾಮರಾದ ಚಿಕ್ಕ ತೆರೆಯ ಮೇಲೆ ಇವರು ತೆಗೆದ ಫೋಟೋಗಳೆಲ್ಲ ಮೆರವಣಿಗೆ ಹೋದವು.

"ಏನಪ್ಪ ಇದು? ಆಕಾಶದಲ್ಲಿ ಬಿಳಿ ರಂಗೋಲೆ?"

"ಓ ಅದೇ? ನಾನು ಕ್ಲಿಕ್ ಮಾಡೋ ಹೊತ್ಗೆ ಜೆಟ್‌ಪ್ಲೇನ್ ಮಾಯವಾಯ್ತು... ಅದ್ರ ಜಾಡು ಹೇಗೆ ಬಂದಿದೆ ನೋಡು.."

ಎರಡನೆಯ ಚಿತ್ರದಲ್ಲಿ ಬುಸುಬುಸು ಬಾಲ -

"ಆ ಪಕ್ಕದ್ಮನೆ ಮುದ್ಕಿ ಕರೆದ್ಲೂಂತ ಕ್ಲಿಕ್ ಮಾಡೊದ್ರೊಳಗೆ ಆ ಬೆಕ್ಕು ಬಾಲ ತಿರುಗಿಸ್ಕೊಂಡು ಓಡ್ತು...."

ನಂತರ ಗುಲಾಬಿ ಹೂವಿನ ಭೂತ -

"ಇದ್ದಕ್ಕಿದ್ದ ಹಾಗೆ ಗಾಳಿ ಜಾಸ್ತಿಯಾಯ್ತುಕಣೋ. ಹೂವು ಗಿಡ ಎಲ್ಲ ಹೇಗೆ ಅಲ್ಲಾಡ್ತುಂತಿಯ?"

ಕೊನೆಗೆ ಸರಪಳಿ ಹಿಡಿದ ಒಂದು ಕೈ -

"ಇದೇ? ಎದುರು ಮನೆ ರಷ್ಯನ್ ಚೆಂಡು ಎಸೆದ. ಸರಿಯಾದ ಸಮಯಕ್ಕೆ ಕ್ಯಾಮರಾದ ಚೌಕಟ್ಟಿನಿಂದ ಓಡ್ಬಿಟ್ತು. ಅವನ ನಾಯಿಮರಿ....ಈ ಕಡೆಯಿಂದ ಆಕಡೆಗೆ ಸರಪಳಿ ಹೇಗೆ ನೀಟಾಗಿ ಬಂದಿದೆ ನೋಡು.."

ಇವರು ಸಮರ್ಥಿಸಿದಾಗ ನಾನು ಕೋಪದಿಂದ ಸಿಡುಕಿದೆ.

"ಸೊಲ್ಪ ಫೋಕಸ್ ಮಾಡಿ, ಸ್ಟೆಡಿಯಾಗಿ ಕ್ಯಾಮರಾ ಹಿಡಿದು ಕರೆಕ್ಟ್ ಟೈಮಿಂಗ್ ಕೊಟ್ಟು ಕ್ಲಿಕ್ ಮಾಡಿದ್ರೆ ಚಿತ್ರಗಳು ದಿವನಾಗಿರತ್ವೆ. ಗಾಲ್ಫಲ್ಲಿ, ಡ್ರೈವಿಂಗಲ್ಲಿ ಕೈ ಸ್ಟೆಡಿ ಇರೋ ನಿಮ್ಗೆ ಇದ್ರಲ್ಮಾತ್ರ ಯಾಕೋ ಹೀಗೆ"

"ಅದೇ ಬೇರೆ ವಿಷ್ಯ. ಇದು ಬೇರೆ. ಕ್ಯಾಮರ ಅಂದ್ರೆ ಏನ್ ತಿಳ್ಕೊಂಡಿದ್ದೀಯ?" ಇವರು ಜೋರು ಮಾಡಿದರು.

ಕ್ಯಾಮರ ವಿಷಯದಲ್ಲಿ ನನಗೂ ಸ್ವಲ್ಪ ಅನುಭವವಿತ್ತು. ನಾನು ಎಸ್.ಎಸ್.ಎಲ್ಸಿ ಪಾಸ್ ಮಾಡಿದಾಗ ನನ್ನ ತಂದೆಯವರು ನನಗೆ ಒಂದು ಬಾಕ್ಸ್‌ಕ್ಯಾಮೆರಾ ಕೊಡ್ಸಿದ್ದರು. ನನ್ನ ಫೋಟೋಗ್ರಫಿ ಪ್ರಯತ್ನಕ್ಕೆಲ್ಲಾ ನನ್ನ ತಮ್ಮನೇ ರೂಪದರ್ಶಿಯಾಗಿದ್ದ. ಆತನಿಗೆ ಲಂಗ ಉಡಿಸಿ, ಒಡವೆ ತೊಡಿಸಿ, ಕೈಯಲ್ಲಿ ಸ್ಟೀಲ್ ಬಿಂದಿಗೆ ಕೊಟ್ಟು, ನಮ್ಮ ಮನೆಯ ಮುಂದಿದ್ದ ಚಿಕ್ಕ ಕಾರಂಜಿಯ ಬಳಿ ನಿಲ್ಲಿಸಿ ನನ್ನ ಮೊದಲ ಫೋಟೋತೆಗೆದೆ. ಬಾಲಕೃಷ್ಣನಂತೆ ಅಲಂಕರಿಸಿ ಮತ್ತೊಂದು, ಶಾಲೆಗೆ ಹೋಗುವ ಬಂಗಿಯಲ್ಲೊಂದು, ಮಲ್ಲಿಗೆ ಹಬ್ಬಿದ್ದ ಕಮಾನಿನ ಮೇಲೆ ಏರಿಸಿ ನಿಲ್ಲಿಸಿ ಒಂದು - ವಿವಿಧ ಠೀವಿಗಳಲ್ಲಿ ನನ್ನ ತಮ್ಮನ ಕಪ್ಪು ಬಿಳುಪಿನ ಫೋಟೋಗಳು ನನ್ನ ಕರಕೌಶಲ್ಯವನ್ನ ಸಾರುತ್ತ ಇಂದಿಗೂ ನಮ್ಮ ಅಮ್ಮನ ಮನೆಯ ಗೋಡೆಯ ಮೇಲೆ ತೂಗುತ್ತಿವೆ.

ನನ್ನ ಕ್ಯಾಮರ ಜ್ಞಾನಕ್ಕೆ ಸವಾಲು ಹಾಕಿದ ಇವರಿಗೆ ನಾನು ಪ್ರತಿಸವಾಲು ಹಾಕಿದೆ. "ಆ ಕ್ಯಾಮರ ಕೊಡಿ. ನಿಮ್ಮನ್ನೆಲ್ಲ ದೇವತೆಗಳ ಹಾಗೆ ಕಾಣೋ ಹಾಗೆ ತೆಗೆದು ತೋರಿಸ್ತೀನಿ..."

''ಛೆ ಛೆ ಛೆ....! ಇದೇನು ಡಬ್ಬ ಅಂದ್ಕೊಂಡ್ಯಾ? ಇದನ್ನ ನಿರ್ವಹಿಸೋದು ಅಷ್ಟು ಸುಲಭ ಅಲ್ಲ... ಎಲ್ಲ ಸಪಿಲ್ಗಳ ಮುಟ್ಟಿದ್ದಾಗೆ ಮುಟ್ಬೇಕು. ಫೆದರ್ ಟಚ್. ಇವಾಗ್ನೋಡು...''

ಹೇಳುತ್ತಲೇ ಇವರು, ನಾನು 'ಇರ್ರೀ' ಅನ್ನೋದರಲ್ಲಿ ನನ್ನನ್ನ ಕುರಿತು ಒಂದು ಕ್ಲಿಕ್ ಮಾಡಿಯೇ ಬಿಟ್ಟರು.

ನಾವೆಲ್ಲರೂ ಒಟ್ಟಿಗೆ ತಲೆಗೂಡಿಸಿ, ಕ್ಯಾಮರಾದ ಪುಟ್ಟ ಪರದೆಯಲ್ಲಿ ನೋಡಿದಾಗ, ಅದರಲ್ಲಿ ನಾನು ನನ್ನ ಮುತ್ತಿನ ಹಾರದೊಡನೆ ರಾರಾಜಿಸುತ್ತಿದ್ದೆ, ರುಂಡವಿಲ್ಲದೆ!

''ಇವೆಲ್ಲ ಬರಿ ಪರೀಕ್ಷಾರ್ಥವಾದ ಫೋಟೋಗಳಷ್ಟೆ ಇನ್ಮುಂದೆ ನೋಡು. ಊರಿಗ್ಹೋಗಿ ನೀನು ಲೇಖನಿ ಬರೆದಾಗ ನನ್ನ ಫೋಟೋಗಳೇ ನಿನ್ಗೆ ಬೇಕಾಗತ್ವೆ..''

ಇವರು ಯಾರನ್ನೂ ನೇರವಾಗಿ ನೋಡಲೂ ಇಲ್ಲ, ಅದೇ ಸಮಯ ಅವರ ಮೀಸೆಗೆ ಮಣ್ಣು ಅಂಟಿದಂತೆಯೂ ಕಾಣಲಿಲ್ಲ.

ವಾರದ ದಿನಗಳಲ್ಲೆಲ್ಲ ಇವರು, ಮನೆಯ ಮುಂದೆ ಜಗುಲಿಯಲ್ಲಿ ಕುಳಿತು ಚಿತ್ರೀಕರಣ ಅಭ್ಯಾಸ ಮಾಡಿದರು. ಹುಲ್ಲು ಹಾಸಿನ ಆಚೆ ಇದ್ದ ಈಜುಕೊಳಕ್ಕೆ ಹೋಗುತ್ತಿದ್ದ ಮಲ್ಲಿಗೆಯ ಚೆಂಡಿನಂತಹ ಮಕ್ಕಳನ್ನೆಲ್ಲ ಕ್ಲಿಕ್ ಮಾಡಿದರು. ಅವೂ ಸಂತೋಷದಿಂದ ಕೈಯಾಡಿಸಿ ಹೋದವು. ರಾಬಿನ್ ರೆಡ್ ಬ್ರೆಸ್ಟ್ ಮಾತ್ರ ಕ್ಯಾಮರ ಕಣ್ಣು ತಪ್ಪಿಸಿ ಸತಾಯಿಸುತ್ತಲೇ ಇತ್ತು.

ವಾರದ ಕೊನೆಯ ದಿನಗಳೆಲ್ಲ, ಕಡಲ ತೀರ, ಜಲಪಾತ, ಹೂದೋಟ, ನದಿಯ ದಂಡೆ, ಜ್ವಾಲಾ ಮುಖಿ ಎಂದು ನಮ್ಮ ಪ್ರವಾಸ ಉತ್ಸಾಹದಿಂದ ತುಂಬಿರುತ್ತಿತ್ತು. ನಮ್ಮ ಮನೆಯ ಬ್ಬಟನಬೆಯ ಖುಷಿಗೆ ಪಾರವೇ ಇರಲಿಲ್ಲ. ಕೈಯಲ್ಲಿ, ಕೊಳಚೆಯಲ್ಲಿ ಹೊರಳಾಡುವ ಹಂದಿಯನ್ನು ಕೂಡ ಮನ್ಮಥ ವಿಗ್ರಹವಾಗಿ ತೋರಬಲ್ಲ ಮಂತ್ರದ ಕೋಲಿನಂತಹ ಕ್ಯಾಮರ. ಎದುರಲ್ಲಿ ದಿಗಂತದವರೆಗೆ ಚೆಲ್ಲಿದ್ದ ಪ್ರಕೃತಿಯ ಸೌಂದರ್ಯ. ಯಾವ ಕಡೆ ಗುರಿ ಇಟ್ಟು ಕ್ಲಿಕ್ ಮಾಡಿದರೂ, ಪ್ರಕೃತಿಯ ಸೌಂದರ್ಯ ಲಹರಿಯ ಒಂದು ಹನಿಯಾದರೂ ಕ್ಯಾಮರ ಕಣ್ಣಿಗೆ ಸಿಕ್ಕೇಸಿಕ್ಕುತ್ತಿತ್ತು. ತನ್ನ ಚಿತ್ರಗಳೆಲ್ಲ ಸುಂದರವಾಗಿದ್ದಿದ್ದು ಕಂಡು ಇವರಿಗೆ ಇನ್ನಷ್ಟು ಹುಮ್ಮಸ್ಸು. ಬ್ಬಟನಬೆ ಮಾಡಿದ್ದೂ ಮಾಡಿದ್ದೆ!

ಒಂದು ವಸ್ತುವನ್ನ ಕೇಂದ್ರೀಕರಿಸೋದರಲ್ಲೂ ಇವರು ಸ್ವಲ್ಪ ಕಿಲಾಡಿ ಯಾಗುತ್ತಿದ್ದಂತೆ ಕಂಡಿತು. ಸಾಕ್ಷಿ? ನಾವು ಎರಡು ಸೌಟಿನ ಐಸ್ಕ್ರೀಮ್ ಕೋನ್‌ಗಳನ್ನು ಪಟ್ಟಾಗಿ ಕೂತು ತಿನ್ನುತ್ತಿದ್ದಾಗ ಇವರು ತೆಗೆದ ಚಿತ್ರ. ಎನ್ನುವ ಚಿತ್ರ ಎಂದ ಮೇಲೆ ಬಾಯನ್ನ ಕೇಂದ್ರೀಕರಿಸಿ ತೆಗೆಯಬೇಕಾದದ್ದೇ. ಆದರೆ ಆಲಿಬಾಬಾ ಕಥೆಯಲ್ಲಿ ಬರುವ ಭೀಕರ ಗುಹೆಗಳಂತೆ ನಮ್ಮ ತೆರೆದ ಬಾಯಿಗಳು – ಬಾಯಿಗಳು ಮಾತ್ರವೇ–ಚಿತ್ರದಲ್ಲಿ ಮೂಡಿ ಬಂದಿದ್ದು ನೋಡಿ ನಮಗೆ ಆಘಾತವಾಯಿತು.

ಇನ್ನು ಮುಂದೆ ಯಾರು ತಿನ್ನುವಾಗಲೂ ಫೋಟೋ ತೆಗೆಯಲ್ಲವೆಂದು ಇವರ ಕೈಯಲ್ಲಿ ಪ್ರಮಾಣ ಮಾಡಿಸಿದೆವು.

ಒಮ್ಮೆ ತಗಡಿನ ಚೂರಿನಿಂದ ನೆಲವನ್ನು ಗೀರಿದ ಹಾಗೆ ಕರ್ಕಶದನಿ ಕೇಳಿ ಕುತೂಹಲದಿಂದ ಮನೆಯ ಕಿಟಕಿಯ ಬಳಿ ಓಡಿದೆ.

"ಬಾತುಗಳಮ್ಮ. ಇಲ್ಲೆಲ್ಲ ನೀರು ನೆಲೆಗಳು ಹೆಚ್ಚಲ್ಲವೇ? ಬಾತುಗಳು ಹಾರಾಡ್ತಾನೇ ಇರತ್ವೆ." ನನ್ನ ಸೊಸೆ ಕೂಡ ನನ್ನ ಬಳಿ ಬಂದು ಇಣುಕುತ್ತಲೇ ಹೇಳಿದಳು.

ಹಾರಾಡುವ ಬಾತುಗಳನ್ನು ಎಂದೂ ನೋಡಿರದ ನಾನು, ಆಶ್ಚರ್ಯದಿಂದ ನೋಡಿದೆ. ಭಾರವಾದ ಮೈ ಹೊತ್ತು, ಕೈ ಚಾಚಿದರೆ ಸಿಕ್ಕುವ ಎತ್ತರದಲ್ಲೇ ದನಿ ಎಬ್ಬಿಸುತ್ತ ಅವು ಹಾರಿ ಹೋದವು. ಇವರು ನಮ್ಮಿಬ್ಬರ ತಲೆಗಳ ಮೇಲೆ ಕ್ಯಾಮರ ಎತ್ತಿಹಿಡಿದು ಕ್ಲಿಕ್ ಮಾಡಿದರು. ಮೂಡಿ ಬಂದ ಚಿತ್ರವನ್ನ ನೋಡಿದ ಯಾರಿಗೂ ಅದು ಏನೆಂದು ಗುರುತಿಸಲಾಗಲೇ ಇಲ್ಲ.

ಹೀಗಾಗಿ ನಮ್ಮ ಎರಡು ತಿಂಗಳ ಪ್ರವಾಸ ಮುಗಿಯುತ್ತ ಬಂದಿತು. ರಾಬಿನ್ ರೆಡ್ ಬ್ರೆಸ್ಟ್ ಮಾತ್ರ ಇನ್ನು ನಮ್ಮ ಕ್ಯಾಮರದ ಕಣ್ಣಿಗೆ ಸಿಕ್ಕದೆ ಸತಾಯಿಸುತ್ತಲೇ ಇತ್ತು.

"ಒಂದೇ ಒಂದು ಕೊನೆಯ ಪ್ರಯತ್ನ ಮಾಡ್ಬಿಡ್ತೀನಿ. ಯಾಕೋ ಈ ರೆಡ್ ಬ್ರೆಸ್ಟ್ ಸಿಕ್ತಾನೇ ಇಲ್ವಲ್ಲ." ಜಗುಲಿಯ ಮೇಲೆ ನಿಂತು ಇವರು ಜೋರಾಗಿ ಕೂಗಿದರು. ಹುಲ್ಲಿನ ಹಾಸು, ಮರಗಿಡಗಳು, ಈಜು ಕೊಳದ ಸುತ್ತ ಬೆಳೆದು ನಿಂತ ಪೊದೆಗಳು, ಎಲ್ಲೆಡೆ ಕ್ಯಾಮರ ಮೂಲಕ ನೋಡ ಹತ್ತಿದರು.

"ಅಪ್ಪ, ನಮ್ಮ ಕಾಂಪ್ಲೆಕ್ಸಿನ ಹೆಂಗಸ್ರೆಲ್ಲ ಪೂಲಲ್ಲಿದ್ದಾರೆ. ಅಲ್ಲಿ ನಿಂತ್ಕೊಂಡು, ಕ್ಯಾಮರ ಬೇರೆ ಹಿಡ್ಕೊಂಡು 'ರೆಡ್ ಬ್ರೆಸ್ಟ್' ಸಿಕ್ಕಿಲ್ಲಾಂತ ಕೂಗ್ಕೊಬೇಡ. ಏನಾದ್ರೂ ವಿಪ್ರೀತ ಆದೀತು."

ಆದಿ ಹೇಳಿದ್ದು ಕೇಳಿ ನಾನು ನನ್ನ ಸೊಸೆ ಗಹಗಹಿಸಿ ನಗಲಾರಂಭಿಸಿದೆವು. ಇವರ ಮುಖ ಪೆಚ್ಚಾಗಿ ಹೋಯಿತು.

"ಅಯ್ಯೋ, ಹೊಳೀಲೇ ಇಲ್ವೇ..." ಎಂದವರೇ, ಕ್ಯಾಮರ ಪ್ಯಾಕ್ ಮಾಡಿ ಸೂಟ್‌ಕೇಸಿಗೆ ಸೇರಿಸಿದರು.

ನನಗೆ ಪಾಪವೆನಿಸಿತು. ಏನೇ ಹೇಳಿ ನಮ್ಮ ಮನೆ ಬ್ವಟನಬೆ ತುಂಬ ಸಾಧು ಪ್ರಾಣಿ.

ಊರಿಗೆ ಹೊರಡುವಾಗ ವಿಮಾನ ನಿಲ್ದಾಣದಲ್ಲಿದ್ದ ಅಂಗಡಿಯೊಂದರಲ್ಲಿ 'ರಾಬಿನ್‌ರೆಡ್ ಬ್ರೆಸ್ಟ್' ವರ್ಣ ಚಿತ್ರವಿದ್ದ ಅಂಚೆ ತೆಗೆಸಿ ಕೊಟ್ಟ ಆದಿ. ಜೊತೆಯಲ್ಲಿ, ನಾವು ಭೇಟಿ ಯಾಗಿದ್ದ ಕೆಲವು ಪ್ರವಾಸೀ ಸ್ಥಳಗಳ ಚಿತ್ರ ಪಟಗಳನ್ನು ಒಂದು ಕಟ್ಟು ಕೊಡಿಸಿದ.

"ಅಮ್ಮ, ನಮ್ಮ ಬ್ವಟನಬೆ ತೆಗೆದ ಚಿತ್ರಗಳು ಸರಿಹೋಗ್ದಿದ್ರೆ ನಿನ್ನ ಲೇಖನಗಳ್ಗೆ ಈ ಕಾರ್ಡುಗಳಲ್ಲಿರೋ ಚಿತ್ರಗಳನ್ನ ಉಪಯೋಗಿಸ್ಕೋ. ಪಾಪ ಅಮ್ಮ ಅಪ್ಪನ್ನ ತುಂಬ ಚುಡಾಯಿಸ್ಬೇಡ." ಎಂದು ಆದಿ ಹೇಳಿದ ಗುಟ್ಟನ್ನು ಕೇಳುತ್ತಲೇ, ನಾನೂ ಅವನ ಜೊತೆ ಸೇರಿ ಇವರತ್ತ ಒಂದು ವಾತ್ಸಲ್ಯದ ನೋಟವನ್ನ ಬೀರಿದೆ.

ಆಸ್ಪತ್ರೆಯಲ್ಲಿ

- ಓಂ ಪ್ರಕಾಶ್

ನಮ್ಮ ಮಾರ್ಥಾಸ್ ಆಸ್ಪತ್ರೆಯಲ್ಲಿ ಒಂದು ಹೊಸ ಕಟ್ಟಡ ಕಟ್ಟಿದರು - ರಕ್ತ ಇತ್ಯಾದಿ ಪರೀಕ್ಷೆಗಳಿಗೆ ಹಾಗೂ ಸಿ.ಟಿ. ಸ್ಕ್ಯಾನ್‌ಗೆ ಅದರ ಉದ್ಘಾಟನೆಗೆ ಅಂತ ಒಬ್ಬರು ಉಪ ಮಂತ್ರಿಗಳನ್ನ ಮುಖ್ಯ ಅತಿಥಿಯಾಗಿ ಕರೆದಿದ್ದರು ಪಾಪ, ಆತನಿಗೆ ಇದೇ ಮೊದಲ ಬಾರಿ ಕರೆದಿದ್ದರೇನೋ? ಸಮಾರಂಭಕ್ಕೆ ಹದಿನೈದು ನಿಮಿಷ ಮುಂಚಿತವಾಗಿಯೇ ಬಂದು ಕೂತ! ನಮಗೆಲ್ಲ ಆಶ್ಚರಿ. ತಾನು ತಂದಿದ್ದ ಭಾಷಣದ ಪ್ರತೀನ ಓದುತ್ತ ಕುಳಿತ - ಯಾರೋ ಬರೆದು ಕೊಟ್ಟಿದ್ದು ಅಂತ ಕಾಣುತ್ತೆ! ಸರಿ, ಸಮಾರಂಭ ಶುರು ಆಯಿತು. 'ಈಗ ಶ್ರೀಮಾನ್.....' ಅವರು ಕೆಲವು ಮಾತುಗಳನ್ನಾಡಿ, ಕಟ್ಟಡದ ಉದ್ಘಾಟನೆ ಮಾಡಬೇಕು ಅಂದರು ಸಿಸ್ಟರ್. ಚಂಗನೆ ಎದ್ದುನಿಂತ ಭೂಪ! ತನ್ನನ್ನು ಕರೆದವರಿಗೆ ನಮ್ರತೆಯಿಂದ ವಂದಿಸಿ, 'ಸೈಂಟ್ ಮರಾಠಾ ಆಸ್ಪತ್ರೆಯ ಖ್ಯಾತಿ ಎಲ್ಲರಿಗೂ ಗೊತ್ತಿದೆ!' ಅಂದ, ನಾವೆಲ್ಲ ನಗು ತಡೆದು ಕೊಳ್ಳಲಾಗದೆ ದಿಗ್ಭ್ರಾಂತರಾಗಿ ಕುಳಿತೆವು!!

★★★

ಕಾರ್ ಪಾರ್ಕಿನ ಹತ್ತಿರ ನಡೆದ ಸಂಗತಿ. ಒಂದು ದಿನ ನಾನು ವಾರ್ಡ್‌ಗೆ ನಡೆಯುತ್ತಿದ್ದಾಗ, ಒಬ್ಬ ಸೂಟುಧಾರಿ ಯುವಕ, 'ಡಾಕ್ಟ್ರೆ, ಗೈನಕಾಲಜಿ ವಿಭಾಗ ಎಲ್ಲಿದೆ?' ಅಂದ, ಅರೆ, ಇವನಿಗೇನು ಬುದ್ಧಿ ಭ್ರಮಣೆ ಆಗಿದೆ ಯೇನೋ ಅನ್ನಿಸಿದರೂ ಆ ವಿಭಾಗದ ದಾರಿ ತೋರಿಸಿದೆ.

ಆ ಮೇಲೆ ನನ್ನ ಇನ್‌ಟರ್ನ್ ಒಬ್ಬ ನನ್ನ ಕಳಿಸಿ, ಪತ್ತೆ ಮಾಡಿದೆ! ಆ ಇನ್‌ಟರ್ನ್ ನಗುತ್ತ ಬಂದು ''ಆತ ಡ್ರಗ್ Representative ಸರ್!'' ಅಂದ. "Elementavy, my Dear Wat Son!' ಅಂದೆ!!

★★★

ಮಕ್ಕಳ ವಿಭಾಗದಲ್ಲಿ ನಡೆದ ವಿಷಯ. ಒಂದು ಆರು ವರ್ಷದ ಹುಡುಗನಿಗೆ ರಕ್ತ ಪರೀಕ್ಷೆ ಮಾಡಬೇಕಾಗಿತ್ತು. ಅವನ ತಂದೆ ಅಲ್ಲೇ ನಿಂತಿದ್ದರು. ನರ್ಸ್ ಸ್ವಲ್ಪ ಹೊರಗೆ ನಿಂತಿರ್ತಿರಾ? ಅಂದಳು. "I am a major in the Army! Not afraid at all!" ಅಂದ ಆತ. ಸರಿ, ನರ್ಸ್ ರಕ್ತ ಸಿರಿಂಜಿನೊಳಕ್ಕೆ ತುಂಬುತ್ತಿದ್ದಾಗ, ಧಪ್ಪನೆ ಶಬ್ದ ಆಯಿತು! ನೋಡಿದರೆ, Major hovizontal Major ಆಗಿದ್ದ! ಅವನ ಮಗ ನಗುತ್ತ ಎದ್ದ!

ಮೇರಿ ಮತ್ತು ಕುರಿಯ ಹಗರಣ

- ಬಿ.ಎಸ್. ಶೈಲಜಾ

ಜಗನ್ನಿಯಾಮಕ ಎನ್ನಿಸಿಕೊಂಡ ಭಗವಾನ್ ವಿಷ್ಣುವಿಗೆ ದಿನವೆಲ್ಲಾ ಏನು ಉದ್ಯೋಗ ಎಂದು ತಲೆ ಕೆಡಿಸಿಕೊಂಡ ಪುರಂದರದಾಸರು ತಮ್ಮದೇ ಊಹೆಯನ್ನು ಒಂದು ದೇವರ ನಾಮವನ್ನಾಗಿ ರಚಿಸಿದ್ದಾರೆ.

ಹರಿಯ ದರುಶನಕಾಗಿ ನಾರದರು ಬರಲು
ಸಿರಿದೇವಿ ಹೊರಗಿನ ಬಾಗಿಲಲ್ಲಿರಲು
ಕರಕಮಲ ಮುಗಿದು ದೊರೆ ಸಮಯವೇನೆನಲು
ನಾರೀಮಣಿ ಲಕುಮಿ ಅರುಹುವಳಾಗ
ವರದೇವತಾರ್ಚನೆಗೆ ಅರಮನೆಯೊಳಗೆ
ಭರದಿಂದ ಕುಳಿತಿಹನು ಪರಮಾತ್ಮನು
ಸರಸಿಜೋದ್ಭವ ಮುಖ್ಯ ಸುರರಿಗೇ ದೊರೆ ಈತ
ಪರಮಾಶ್ಚರ್ಯವನ್ನು ಅರಿಯಬೇಕೆಂದ

(ಸುರರಿಗೇ ದೊರೆಯಾದವನು ಅರ್ಚಿಸುವುದು ಯಾರನ್ನು? ಇದೇ ನಾರದನ ಸಂದೇಹ)

ಹರಿದಾಸರ ಚರಣರ ಜಗಳ ತುಂಬಿಟ್ಟು
ತೆರೆದು ತೋರಿದ ಮುನಿಗೆ ಪರಮಾತ್ಮನು

(ಹರಿದಾಸರ ಪಾದಧೂಳಿಯನ್ನು ಥಳಥಳಿಸುವ ರತ್ನ ಸಂಪುಟದಲ್ಲಿಟ್ಟು ಪರಮಾತ್ಮ ಪೂಜಿಸುತ್ತಿದ್ದನಂತೆ!)

ಹೀಗೆ ಒಮ್ಮೆ ಭಗವಂತ ಅರ್ಚಿಸುತ್ತಾ ಕುಳಿತಿದ್ದಾಗ ಒಂದು ಕಾನ್ಫಿಡೆನ್ಷಿಯಲ್ ಮೇಲ್ ಬಂದು ಕೂಗಿ ವ್ರತಭಂಗಗೊಳಿಸಿತು. ಕಾಗದ ಹೀಗಿತ್ತು.

ಪಿತಾಶ್ರೀಯವರೇ,

ತಮ್ಮ ಚರಣ ಕಮಲಗಳಿಗೆ ನಮನ.

ಜೀವವೊಂದು ಕಳುವಾಗಿದೆ. ಈ ಬಗ್ಗೆ ತುರ್ತಾಗಿ ಚರ್ಚಿಸಬೇಕಾಗಿದೆ.

ತಮ್ಮ ವಿಧೇಯ ಪುತ್ರ, ಬ್ರಹ್ಮ.

ಇದನ್ನೋದಿದ ವಿಷ್ಣು ಚಿಂತಾಕ್ರಾಂತನಾದ. ತತ್‌ಕ್ಷಣವೇ ಆಪ್ತರಾದ ಗರುಡನನ್ನು ವಾಸುಕಿಯನ್ನೂ ರಹಸ್ಯಕೋಣೆಗೆ ಬರಮಾಡಿಕೊಂಡ. ಇದನ್ನೇ ನಿರೀಕ್ಷಿಸಿದಂತೆ ಇಬ್ಬರೂ ತನಿಖಾವರದಿಯನ್ನೇ ಹಿಡಿದುಕೊಂಡು ಬಂದರು. ವರದಿ ಹೀಗಿತ್ತು.

★★★

ಭೂಲೋಕದಲ್ಲಿ ಮೇರಿ ಎಂಬ ಕನ್ಯೆ – ಶಿಶು ಎನ್ನುವುದೇ ಸೂಕ್ತ. ಈಕೆಯ ಅಚ್ಚುಮೆಚ್ಚಿನ ಪ್ರಾಣಿ ಒಂದು ಕುರಿಮರಿ. ಇದು ಯಾವಾಗಲೂ ಅವಳ ಹಿಂದೆಯೇ ಇರುತ್ತಿತ್ತು. ಅವಳ ಜೊತೆಗೆ ಶಾಲೆಗೂ (ಇದಕ್ಕೆ ಕೇಜಿ ಎಂದು ಹೆಸರಂತೆ) ಹೋಗಿ ಬಿಡುತ್ತಿತ್ತು. ಭೂಲೋಕವಲ್ಲೆಲ್ಲಾ ಇದು ಪ್ರಸಿದ್ಧಿ. ಉಳಿದ ಎಲ್ಲ ಶಿಶುಗಳೂ ಈ ಕುರಿಯ ಬಗ್ಗೆ ಅದರ ಮೇಲಿನ ಮೇರಿಯ ಪ್ರೇಮದ ಬಗ್ಗೆ ಗೀತಪಾಠಣ ದಿನಕ್ಕೊಮ್ಮೆಯಾದರೂ ನಡೆಸುತ್ತಿದ್ದರು. (ಸೂಚನೆ: ಆ ಗೀತದ ಭಾಷೆ ವಾಸುಕಿಗೆ ತಿಳಿದಿರಲಿಲ್ಲವಾದದ್ದರಿಂದ ಅದನ್ನಾತ ಬರೆದುಕೊಂಡಿರಲಿಲ್ಲ)

ಇದೇ ಸಂದರ್ಭದಲ್ಲಿ ಕೆಲವೊಂದು ಜನ ತಮ್ಮ ಭಗವಂತನಿಗೆ ಕುರಿಯ ಕಾಣಿಕೆಯನ್ನು ಕೊಡಲು ನಿರ್ಧರಿಸಿದರು. ಮೇರಿಯ ಕುರಿಯ ಅಪ್ಪ ಅಮ್ಮಂದಿರು ಈ ಮೆರವಣಿಗೆಗೆ ಸೇರ್ಪಡೆಯಾದಾಗ ಮರಿಯ ಹಿಂದೆ ಮೇರಿಯೂ ಸೇರಿದಳು. ಮುಂದೆ ಏನು ನಡೆಯಬಹುದು ಎಂಬುದರ ಅರಿವಿಲ್ಲದೇ ಶಿಶು ಕಣ್ಣು ಕಣ್ಣು ಬಿಡುತ್ತಿದ್ದಾಗ, ಮರಿಯ ಶಿರಚ್ಛೇದನವಾಗಿ ಹೋಯಿತು. ಅದು ಸತ್ತಿದೆ ಎಂದೂ ತಿಳಿಯದ ಮುಗ್ಧ ಅದರ ಕಳೇಬರವನ್ನು ತಬ್ಬಿಕುಳಿತು ಅನ್ನಾಹಾರಗಳನ್ನು ತ್ಯಜಿಸಿತು. ಆಕೆಯ ಮುಗ್ಧ ಮನಸ್ಸಿನ ರೋಧನೆ ಲಕ್ಷ್ಮೀದೇವಿಗೆ ಕೇಳಿಸಿತು. ಆಕೆಯ ಕರುಳು ಕರಗಿತು. ಬ್ರಹ್ಮದೇವನನ್ನು ವಿಚಾರಿಸಲಾಗಿ, ''ಕಳೆದು ಹೋದ ಜೀವವನ್ನು ಪುನಃ ಸ್ಥಾಪಿಸಲಾಗದು. ಸತ್ಯವಾನನ ಘಟನೆಯೇ ಮೊದಲು ಮತ್ತು ಕೊನೆಯದು'' ಎಂದು ಖಡಾಖಂಡಿತವಾದ ಉತ್ತರ ಬಂದಿತು.

ಈ ನಡುವೆ ''ಒಒಡಿ'' ಎಂದು ಯಮ ನಾಪತ್ತೆಯಾಗಿದ್ದ ಕಾರಣ ಚಿತ್ರಗುಪ್ತ ಬ್ರಹ್ಮದೇವನನ್ನೇ ಕಾಣಲು ಬಂದ. ಪುಟ್ಟ ಕುರಿಮರಿಯ ಆಯುಸ್ಸು ಇನ್ನೂ ಮುಗಿದಿರಲಿಲ್ಲವೆಂದೂ, ಸ್ವರ್ಗದ ಬಾಗಿಲಲ್ಲಿದ್ದ ಸೆಕ್ಯೂರಿಟಿ ಅಲಾರಂ ಗಂಟೆ ಹೊಡೆದು ಇದನ್ನು ಸೂಚಿಸಿತೆಂದು ತಿಳಿಸಿದ ಚಿತ್ರಗುಪ್ತ. ಅದನ್ನು ತಂದ ದೂತರನ್ನು ವೈತರಣಿ ನದಿಯಾಚೆಯೇ ನಿಲ್ಲಿಸಿ ''ಸಸ್ಪೆಂಡ್'' ಆಜ್ಞೆ ಹೊರಡಿಸಲಾಗಿದೆ ಎಂದೂ ತಿಳಿಸಿದ. ಆದರೆ ಯಮ ಹಿಂದಿರುಗುವವರೆಗೂ ಜೀವವನ್ನು ಹಿಡಿದಿಟ್ಟುಕೊಳ್ಳಲಾಗದು ಮುಂದಿನ ಕ್ರಮ ಏನು ಎಂದು ತಿಳಿಯದೇ ಆತ ಸಂದಿಗ್ಧಕ್ಕೆ ಒಳಗಾಗಿದ್ದ. ಅಲ್ಲೇ ಇದ್ದ ಲಕ್ಷ್ಮೀದೇವಿಯು ಸಂತುಷ್ಟಳಾಗಿ ತತ್‌ಕ್ಷಣವೇ ಅದನ್ನು ಹಿಂದಿರುಗಿಸಲು ಆದೇಶ ನೀಡಬೇಕೆಂದು ಬ್ರಹ್ಮನನ್ನು ಕೋರಿದಳು. ಆಜ್ಞೆ ಜಾರಿಯಾಯಿತು.

ಈ ಅವಧಿಯಲ್ಲಿ ಜೀವವು ದೇಹವಿಲ್ಲದೇ ಪರದಾಡುತ್ತಾ ಯಮದೂತನ ಕೈಯಿಂದ ಜಾರಿ ಹೋಯಿತು. ದಿಗ್ಭ್ರಾಂತರಾದ ದೂತರು ಚಿತ್ರಗುಪ್ತನಿಗಾಗಿ ಬೊಬ್ಬೆ ಇಡ ತೊಡಗಿದರು. ಚಾಣಾಕ್ಷರಾದ ಮನುಷ್ಯರು ಅದನ್ನು ಹಿಡಿದು ಇನ್ನೊಂದು ಕುರಿಮರಿಯ ದೇಹದೊಳಗೆ ಸೇರಿಸಿಬಿಟ್ಟರು. ತಂದೆಯಿಲ್ಲದೇ ಹುಟ್ಟಿದ ಈ ಕುರಿಗೆ ''ಡಾಲಿ'' ಎಂದು ಹೆಸರಿಟ್ಟು ತಾವೇ ಜೀವವನ್ನು ಸೃಷ್ಟಿ ಮಾಡಿದ್ದಾಗಿ ಪತ್ರಿಕಾ ಪ್ರಕಟಣೆಗಳನ್ನೂ ಹೊರಡಿಸಿದರು. ಎಲ್ಲೆಲ್ಲೂ ''ಡಾಲಿ''ಯ ಸುದ್ದಿಯೇ ಸುದ್ದಿ.

ಇದನ್ನೋದಿದ ಯಮ "ಒಓಡಿ"ಯನ್ನು ಮೊಟಕುಗೊಳಿಸಿ ಓಡಿಬಂದ. ಚಿತ್ರಗುಪ್ತ ಮತ್ತು ದೂತನ ಸಮೇತ ಬ್ರಹ್ಮನ ಮೊರೆಹೊಕ್ಕ. ಸಾಕಷ್ಟು ತಲೆಕೆಡಿಸಿಕೊಂಡು ಬ್ರಹ್ಮ "ಕುರಿಮರಿಯ ಜೀವ ಕುರಿಮರಿಗೇ ಹೋಗಿದೆ, ನಿಮ್ಮ ಲೆಕ್ಕದ ಪುಸ್ತಕದಲ್ಲಿ ಜಮಾ-ಖರ್ಚು ತಾಳೆಯಾಗಿದೆ. ಆದ್ದರಿಂದ ಈ ಪ್ರಕರಣವನ್ನು ಇಲ್ಲಿಗೇ ಮುಗಿಸೋಣ" ಎಂದಾಗ ಫೈಲು ಬರಖಾಸ್ತ್ ಆಯಿತು.


★★★

ವಿಷ್ಣು ಹೇಳುವ ಮೊದಲೇ ವಾಸುಕಿ ಮತ್ತು ಗರುಡ ಈ ವರದಿಯನ್ನು ತಯಾರಿಸಿದ್ದು ಹೇಗೆ? "ಸಿಂಪಲ್" ಎಂದ ಗರುಡ. "ಎಲ್ಲೆಲ್ಲೂ ಅದರದೇ ಸುದ್ದಿ. ಮಾನವರು ಜೀವಸೃಷ್ಟಿ ಆರಂಭಿಸಿಬಿಟ್ಟರೆ ಬ್ರಹ್ಮನ ಗತಿ ಏನು ಎಂದು ನನಗೆ ಚಿಂತೆಯಾಯಿತು. ಅಲ್ಲದೇ ನೀವು ಪೂಜೆ ಮುಗಿಸುವಷ್ಟರಲ್ಲಿ ಆ ಡಾಲಿಯೂ ಮರಿ ಹಾಕಿ ಬಿಟ್ಟಿದೆ" ಎಂದ.

ಈಗ ವಿಷ್ಣುವಿಗೆ ಅಸಾಧ್ಯಸಿಟ್ಟು ಬಂದಿತು. ಜೀವವನ್ನು ಕಳೆದು, ಆ ಪ್ರಸಂಗದ ತಿಪ್ಪೆಸಾರಿಸಿದ ಬ್ರಹ್ಮನೇ ಈಗ ಹೀಗೊಂದು ಪತ್ರ ಏಕೆ ಬರೆದ? ಎಂದು ತತ್‌ಕ್ಷಣವೇ ಷೋಕಾಸ್ ನೋಟೀಸು ಜಾರಿಯಾಯಿತು. ಈಮೇಲ್ ಈ ಕಡೆಯಿಂದ ಹೋಗುವಷ್ಟರಲ್ಲಿ ಆಕಡೆಯಿಂದ ಬ್ರಹ್ಮನ ಮೇಲ್ ಬಂದಿತು. ಬ್ರಹ್ಮನ ರಾಜಿನಾಮೆ ಪತ್ರ. ಜೊತೆಗೆ ಒಂದು ದೊಡ್ಡ ಅಟ್ಯಾಚ್‌ಮೆಂಟ್ - "ಕಾನ್‌ಫಿಡೆನ್ಷಿಯಲ್" ಎಂಬ ಗುರುತಿನೊಡನೆ.

ಏನಪ್ಪಾ ಅದು ಅಟ್ಯಾಚ್‌ಮೆಂಟು?

(.... ಮುಂದಿನ ಸಂಚಿಕೆಯಲ್ಲಿ)



ತುಂತುರು

- ಸುಳ್ಳು ಬೀಜವಾಗಿಯೇ ಉಳಿಯದು. ಸತ್ಯದ ಮೊಳಕೆ ಒಡದೇ ಒಡೆಯುತ್ತದೆ.
- ಆ್ಯಡಂ ಮತ್ತು ಈವ್ ಅವರ ವಿವಾಹ ಯಶಸ್ವಿಯಾಗಿರಲೇಬೇಕು. ಏಕೆಂದರೆ ಇಬ್ಬರಿಗೂ ತಮ್ಮ ತಮ್ಮ ಅತ್ತೆ ಮಾವಂದಿರನ್ನು ಟೀಕಿಸಲು ಅವಕಾಶವೇ ಇರಲಿಲ್ಲ!
- I am still an athiest, thank God!
- ಒತ್ತುವರಿ ಮಾಡಿಲ್ಲ ಅಂದಮೇಲೆ ಯಾಕೆ ವರಿ?
- Yenjoy like Yenny thing
- ನೀನು ಇನ್ನು ಆರು ತಿಂಗಳು ಬದುಕಲಿದ್ದೀಯಾ ಎಂದು ವೈದ್ಯರು ಹೇಳಿದರು, ಆದರೆ ಅವರ ಬಿಲ್ ತೀರಿಸಲಾಗದ್ದರಿಂದ ನನ್ನ ಆಯಸ್ಸನ್ನು ಇನ್ನು ಆರು ತಿಂಗಳು ಹೆಚ್ಚಿಸಿದರು!
- ಕೆಲವರು ಹಸಿವಿನಿಂದ ಸತ್ತರೆ ಕೆಲವರು ತಿನ್ನುತ್ತಾ ಸಾಯುತ್ತಾರೆ; ಕಾಯಿಲೆ ಬೀಳುವಷ್ಟು ತಿನ್ನುವವನು ನಂತರ ಸುಧಾರಿಸಿಕೊಳ್ಳಲು ಉಪವಾಸ ಇರಬೇಕಾಗುತ್ತದೆ. ಎಂತಹ ವಿಪರ್ಯಾಸ!
- ಗೀತೆ ಪ್ರಾಮಾಣಿಕರು ರೂಢಿಸಿಕೊಳ್ಳುತ್ತಾರೆ; ತಪ್ಪಿತಸ್ಥರು ಅದರ ಮೇಲೆ ಕೈ ಇಟ್ಟು ಪ್ರಮಾಣ ಮಾಡುತ್ತಾರೆ.
- I am very busy doing little work.
- ಬಿಡಿ ಅಪ್ಪಾ! ನಾನೇನು ರಾಜಕೀಯ ಸೇರೊಲ್ಲ ನಿಮ್ಮ ಹಾಗೆ. ನೀವು ಮಾಡಿರೋ ಆಸ್ತೀನಾ ಖರ್ಚು ಮಾಡೋಕೆ ಯಾರಾದರೂ ಬೇಡವೆ?
- ಯಶಸ್ವಿ ಮನುಷ್ಯ ಯಾರು ಗೊತ್ತೆ? ಅವನತ್ತ ಎಸೆದ ಕಲ್ಲುಗಳನ್ನು ಪೇರಿಸಿ ಒಂದು ಭದ್ರವಾದ ಅಡಿಪಾಯ ಹಾಕಿಕೊಳ್ಳುವವನು.
- ಕೈಮರವೇ ಊರಲ್ಲ; ನಿ.ವೀ. ಕಲ್ಲೇ ನಗರವಲ್ಲ.
- Life is a continuous battle to find your own space. Any Hawking or hawker can tell you this.
- ಚುನಾವಣೆಯಲ್ಲಿ ಯೋಗ್ಯರು ಆಯ್ಕೆಯಾಗಲಿ ಎಂದು ನಾವು ಬಯಸುತ್ತೇವೆ. ಆದರೆ ಅವರು ಸ್ಪರ್ಧಿಸುವುದೇ ಇಲ್ಲ.
- Mujhe Jante sabhi hai

  Par Pehchanta Koi nahi

- ದಂನಆ

‘ಹಾಸ್ಪಿಟಲ್’ ಎಲ್ಲಿದೆ?

- ಮನು

ನನ್ನ ಗೆಳೆಯ ವಿಶ್ರಾಮ್ ಶಿಂಧೆ. ಅವನು ಕೆಲವು ದಿನ ಲಂಡನ್‌ನಲ್ಲಿದ್ದ. ಹಾಗಿದ್ದಾಗ ಅವನು ಒಬ್ಬಾಕೆಯ ಮನೆಯಲ್ಲಿ ‘ಪೇಯಿಂಗ್ ಗೆಸ್ಟ್’ ಆಗಿದ್ದ. ಆಕೆ ಸ್ಥೂಲಕಾಯದ ಹೆಂಗಸು. ಆದರೆ ಚುರುಕಾಗಿ ಓಡಾಡುತ್ತಿದ್ದಳು. ಆಕೆಗೆ ಸಾಕಷ್ಟು ಹಾಸ್ಯ ಪ್ರಜ್ಞೆ ಇದ್ದಿರಬೇಕು. ವಿಶ್ರಾಮ್ ಜೊತೆಗೆ ಮತ್ತೊಬ್ಬ ಸರದಾರಜೀಯನ್ನು ಪೇಯಿಂಗ್ ಗೆಸ್ಟ್ ಆಗಿ ತೆಗೆದುಕೊಂಡಿದ್ದಳು! ಆ ಸರದಾರಜೀಯೊ ನೇರ ಪಂಜಾಬ್‌ನಿಂದ ಹಾರಿ ಬಂದವನ ಹಾಗೆ ತೋರುತ್ತಿದ್ದ. ಇಂಗ್ಲೀಷ್ ಅನ್ನು ಬಳಸುವುದಕ್ಕಿಂತ ಅದನ್ನು ಕೊಲೆ ಮಾಡುವುದರಲ್ಲಿ ಅವನಿಗೆ ಹೆಚ್ಚು ಆಸಕ್ತಿಯಿರುವಂತೆ ತೋರುತ್ತಿತ್ತು. ಈ ತಾಪತ್ರಯವೇ ಬೇಡ ಎಂದು ವಿಶ್ರಾಮ್ ಆ ಸರದಾರನ ಜೊತೆ ಹಿಂದಿಯಲ್ಲೇ ಮಾತಾಡುತ್ತಿದ್ದ.

ಮನೆಯೊಡತಿಯ ಕಾಂಟ್ರಾಕ್ಟ್ ಪ್ರಕಾರ ಪೇಯಿಂಗ್ ಗೆಸ್ಟ್ ಎಂದರೆ ಇರುವುದಕ್ಕೆ ಕೊಠಡಿ ಮತ್ತು ಬೆಳಗಿನ ಅಲ್ಪಾಹಾರ. ಮಿಕ್ಕಿದ್ದೆಲ್ಲಾ ಹೊರಗಡೆ ಮಾಡಿಕೊಳ್ಳಬೇಕು. ಹೀಗೇ ನಡೆಯುತ್ತಿತ್ತು.

ಹೀಗಿರುವಾಗ ಕ್ರಿಸ್‌ಮಸ್ ಹಬ್ಬ ಬಂದಿತು. ಮನೆಯೊಡತಿ ಸಡಗರದಿಂದ ಓಡಾಡುವುದು ಕಾಣಿಸುತ್ತಿತ್ತು. ನಂತರ ಅವಳು ಇವರಿಬ್ಬರನ್ನೂ ಕರೆದು, ‘ಈ ದಿನ ರಾತ್ರಿ ನಮ್ಮಲ್ಲಿ ಫೀಸ್ಟ್ (ದೊಡ್ಡ ಊಟ) ಇದೆ. ನೀವೂ ಬರಬೇಕು. ನಮ್ಮ ಅತಿಥಿಗಳು ನೀವು’ ಎಂದು ಹೇಳಿದಳು. ಇಬ್ಬರ ಮುಖ ಅರಳಿತು.

ವಾಪಸ್ಸು ಕೊಠಡಿಗೆ ಬಂದ ಮೇಲೆ ಸರದಾರ ಖುಷಿಯಾಗಿ, ‘ಬಹಳ ದಿನದಿಂದ ಒಳ್ಳೆ ಊಟ ಮಾಡಿಲ್ಲ. ಈವತ್ತು ಕಂಠಪೂರ್ತಿ ತಿಂದು ಬಿಡ್ತೀನಿ’ ಎಂದ. ಅವನ ಕಡೆ ತೀಕ್ಷ್ಣವಾಗಿ ನೋಡಿದ ವಿಶ್ರಾಮ್,

‘ಆಯಿತು ನೂರಾರು. ಆದರೆ ನಿನ್ನ ಬಾಯಿನ ಹಾಗೆ ಹೊಲೆದುಕೊಂಡಿರು’ ಎಂದ.

‘ಬಾಯಿನ ಹೊಲೆದು ಕೊಂಡಿರು! ಏನು ಹಾಗಂದರೆ?’ ಸರದಾರನಿಗೆ ಕೋಪವೇ ಬಂದಿತ್ತು.

‘ತಿನ್ನೋದಕ್ಕೆ ಮಾತ್ರ ಬಾಯಿ ತೆರಿ, ಆಯಿತೇ? ಒಂದು ಶಬ್ದ ಹೊರಗೆ ಬರಬಾರದು. ನಿನ್ನ ಇಂಗ್ಲಿಷ್ ಕೇಳಿ ಆಕೆ ಆತ್ಮಹತ್ಯೆ ಮಾಡಿಕೊಂಡಿಲ್ಲ, ನಿನ್ನ-ನನ್ನ ಪುಣ್ಯ’ ಎಂದು ಘರ್ಜಿಸಿದ.

ತನ್ನ ಇತಿ-ಮಿತಿಗಳನ್ನು ಅರಿತಿದ್ದ ಸರದಾರ ವಿಶ್ರಾಮನ ಮಾತಿಗೆ ತಲೆಯಾಡಿಸಿದ ಊಟ ನಿಜವಾಗಿ ಭರ್ಜರಿಯಾಗಿತ್ತು. ಸರದಾರ ಯಾವುದೇ ಸಂಕೋಚವಿಲ್ಲದೆ ಗಡದ್ದಾಗಿ ತಿಂದ. ಆ ಮನೆಯೊಡತಿಯೂ ಊಟ ಬಡಿಸುವುದರಲ್ಲಿ ಆನಂದ ಪಡುತ್ತಿದ್ದಳೇನೊ. ಸರದಾರ ಸಾಕು ಅನ್ನುವವರೆಗೆ ಬಡಿಸುತ್ತಲೇ ಹೋದಳು.

ಊಟ ಆದ ಮೇಲೆ ವಿಶ್ರಾಮ ಆಕೆಯ ಜೊತೆ ಹರಟುತ್ತಾ ಕುಳಿತ. ಅವಳ ಅಡಿಗೆಯ

ರುಚಿ, ಭಾರತದ ಅಡಿಗೆಗೂ ಇಲ್ಲಿಗೂ ಇರುವ ವ್ಯತ್ಯಾಸ ಹೀಗೆ ಹಲವೊಂದು ಮಾತನಾಡಿದ, ಅವಳೂ ತನ್ನ ಮಕ್ಕಳು ಊರಿನಲ್ಲಿ ಇಲ್ಲದೇ ಇರುವುದು, ತುಂಬಾ ದೂರದಲ್ಲಿ ಇರುವುದರಿಂದ ಬರಲು ಸಾಧ್ಯವಾಗದು ಇತ್ಯಾದಿ ಮಾತುಗಳಿಂದ ಸುಖ-ದುಖ ತೋಡಿಕೊಂಡಳು. ಈವತ್ತು ಊಟಕ್ಕೆ ಬಂದು ತನ್ನ ಮಕ್ಕಳು ಬರಲಿಲ್ಲ ಎಂಬ ವ್ಯಥೆಯನ್ನು ಕಡಿಮೆ ಮಾಡಿದಿರಿ ಎಂದು ಹೇಳಿದಳು.

ಇದೆಲ್ಲದರ ಮಧ್ಯೆ ಸರದಾರ ಚಡಪಡಿಸುತ್ತಿದ್ದ. ತಾನು ಏನಾದರೂ ಮಾತನಾಡಬೇಕು ಎಂದು ಬಯಸುತ್ತಿದ್ದ. ಅವಳಿಗೆ ಕೃತಜ್ಞತೆ ಸೂಚಿಸಬೇಕು ಎಂದು ಅವನಿಗನ್ನಿಸುತ್ತಿತ್ತು. ಆದರೆ ವಿಶ್ರಾಮ ಅವನ ಕಡೆ ನೋಡಿ ತನ್ನ ತುಟಿಯ ಮೇಲೆ ಬೆರಳಿಟ್ಟು 'ಸುಮ್ಮನಿರು' ಎಂದು ಸೂಚನೆ ನೀಡುತ್ತಿದ್ದುದು ಅವನಿಗೆ ನುಂಗಲಾರದ ತುತ್ತಾಗಿತ್ತು.

ಅಂತೂ ಇಬ್ಬರು ತಮ್ಮ ಕೊಠಡಿಗಳಿಗೆ ಹೊರಟರು. ಸರದಾರನಿಗೆ ತಡೆಯಲಾಗಲಿಲ್ಲ.

"Thank you for your hostility" ಎಂದುಬಿಟ್ಟ!

ಮನೆಯೊಡತಿಯ ಹುಬ್ಬು ಮೇಲಕ್ಕೇರಿತು. ಇನ್ನೇನಾದರೂ ಅನಾಹುತವಾಗುವುದಕ್ಕೆ ಮುನ್ನ ಇಲ್ಲಿಂದ ಸರದಾರನನ್ನು ಸಾಗಿಹಾಕಬೇಕೆಂದು ವಿಶ್ರಾಮ ಅವನನ್ನು ದರದರನೆ ಎಳೆದುಕೊಂಡು ಹೋದ.

'ನಿನಗೇನು ಹೇಳಿದ್ದೆ? ಬಾಯಿ ಹೊಲೆದುಕೊಂಡಿರು ಅಂತ, ಈಡಿಯಟ್' ಎಂದು ಘರ್ಜಿಸಿದ ವಿಶ್ರಾಮ ತನ್ನ ರೂಮಿಗೆ ಹೋದ ಮೇಲೆ.

'ಯಾಕೋ? ನಾನು ಹೇಳಿದ್ದು ಸರಿ ಹೋಗಲಿಲ್ಲವೇ?'

'ನಿನ್ನ ಮುಂಡಾಮೋಚಿತು. Hostility ಅಲ್ಲ, ಹೇಳಬೇಕಾದ್ದು Hospitality' ಎಂದ ವಿಶ್ರಾಮ.

ಒಂದು ಕ್ಷಣ ತನ್ನ ಟರ್ಬನ್ ಅನ್ನು ಕೆರೆದುಕೊಂಡ ಸರದಾರ,

'ಹಾಂ... ನನಗೆ ಆ ಪದ ಜ್ಞಾಪಕ ಬಂತು... ಆದರೆ ಅದು ಸರಿಯಲ್ಲ ಅಂದುಕೊಂಡೆ. ಇಲ್ಲಿ hoapital ಎಲ್ಲಿಂದ ಬಂತು? ಆಕೆ ಹೇಗಾದರೂ ನಮ್ಮ host ಅಲ್ಲವೇ? ಅದಕ್ಕೆ...!'

ಕಾಲಕ್ಕೆ ತಕ್ಕಂತೆ

"ಉಗ್ರ" ನೊಬ್ಬನಿದ್ದನು
ಚೀಲದಲ್ಲಿ ಬಾಂಬು ತುಂಬಿ
ಮಾರುಕಟ್ಟೆ ಚೌಕದಲ್ಲಿ
"ಢಮಾರ್" ಎಂದು ಬಾಂಬು ಸಿಡಿಸಿ.....
"ಉಗ್ರ" ನೊಬ್ಬನ್ "ಇದ್ದ" ನು

ಕೊರವಂಜಿ ಅಪರಂಜಿ ಟ್ರಸ್ಟ್ ಆಯೋಜನೆ ಮಾಡಿದ್ದ ಪಡುಕೋಣೆ ರಮಾನಂದರಾವ್ ಸ್ಮಾರಕ ಹಾಸ್ಯ ಲೇಖನ ಸ್ಪರ್ಧೆ

2007 ರಲ್ಲಿ ಈ ಕೆಳಕಂಡ ಲೇಖನಗಳು ಬಹುಮಾನ ಗಳಿಸಿವೆ.

ಪ್ರಥಮ ಬಹುಮಾನ - ರೂ. 1000/-
ಪಾಕ ಪರಾಕ್ರಮ - ಶ್ರೀ ಪ. ರಾಮಕೃಷ್ಣ ಶಾಸ್ತ್ರಿ, ತೆಂಕಕಾರಂದೂರು

ದ್ವಿತೀಯ ಬಹುಮಾನ - ರೂ. 750/-
ಡಾಲರ್ ಪೀಠ ನಗೆ ನೋಬಲ್ - ಶ್ರೀ ತುರುವೇಕೆರೆ ಪ್ರಸಾದ್, ತುರುವೇಕೆರೆ

ತೃತೀಯ ಬಹುಮಾನ - ರೂ. 500/-
ಸುಗ್ರಪ್ಪನ ಶಿಲಾವಿಗ್ರಹ -ಶ್ರೀಮತಿ ನಿರುಪಮಾ, ಬೆಂಗಳೂರು

ಇದಲ್ಲದೆ ಈ ಕೆಳಕಂಡ ಲೇಖನಗಳು ತೀರ್ಪುಗಾರರ ಮೆಚ್ಚುಗೆ ಗಳಿಸಿವೆ.

ನಮ್ದೇನೈತೆ ಎಲ್ಲಾ ಅವನ್ದೇ	- ಮಣಿ, ಬೆಂಗಳೂರು
ಧರ್ಮರಾಯನ ಅಪರಾವತಾರ	- ಡಾ.ಬಿ. ಪ್ರಾಣೇಶರಾವ್, ಬೆಂಗಳೂರು
ನನ್ನ ಜನಗಣತಿ ಕೆಲಸದ	- ವೈ.ಎನ್. ಸುಬ್ರಮಣ್ಯ, ಮೈಸೂರು
ಹಗ್ಗ - ಹಾವು	- ಸತ್ಯೇಶ್ ಎನ್ ಬೆಳ್ಳೂರು, ಬೆಂಗಳೂರು
ಪಂಚಕನ್ಯಾ ಸ್ಮರೇನಿತ್ಯಂ	- ಆಂಡಾಳ್ ಶರ್ಮ, ಬೆಂಗಳೂರು
ಕಲ್ಲೇತಿಯ ಇಂಟ್ರೊ	- ಡಿ.ಎ. ನಳಿನಕುಮಾರಿ, ಬೆಂಗಳೂರು
ಇರುವೆ ನೀ ಎಲ್ಲಿಗೆ ಹೊರಟಿರುವೆ	- ಸಿ. ಹೇಮಲತ, ಮೈಸೂರು

ತೀರ್ಪುಗಾರರ ಅನಿಸಿಕೆ:


ಈ ಬಾರಿಯ ಸ್ಪರ್ಧೆಗೆ ಬಂದ ಲೇಖನಗಳಲ್ಲಿ (ಸುಮಾರು 47) ಬಹುಪಾಲು ಬೆಂಗಳೂರಿನಿಂದ ಬಂದವುಗಳಾದರೆ ದೂರದ ಬರೋಡ, ಬೆಳಗಾಂ, ಬಿಜಾಪುರ, ರಾಯಚೂರು, ಧಾರವಾಡ, ಚಿತ್ರದುರ್ಗ ಮುಂತಾದ ಕಡೆಗಳಿಂದಲೂ ಬಂದಿದ್ದವು ಅರ್ಧದಷ್ಟು ಲೇಖನಗಳು ಲೇಖಕಿಯರಿಂದಲೇ ಬಂದಿದ್ದವು ಅನ್ನುವುದೂ ಗಮನಾರ್ಹ. ಅನೇಕ ಪ್ರಸಿದ್ಧ ಬರಹಗಾರರೂ ಕೂಡ ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದುದು ಒಂದು ವಿಶೇಷ. ಜೊತೆಗೆ ಹೊಸಬರ ಅನೇಕ ನಗೆಲೇಖನಗಳು ಭರವಸೆಯನ್ನು ಮೂಡಿಸುವಂತಿದ್ದವು. ಜೊತೆಗೆ ಕೆಲವು ಲೇಖಕರ ಪ್ರಥಮ ಪ್ರಯತ್ನದ ಬರಹಗಳೂ ಇದ್ದವು.

ಸರಸ-ವಿರಸ ದಾಂಪತ್ಯ, ಸಭೆ-ಸಮಾರಂಭದಲ್ಲಿನ ಪೇಚಿನ ಪ್ರಸಂಗಗಳು, ಯಜಮಾನಿ-ಕೆಲಸಗಿತ್ತಿಯ ಸಂಬಂಧ, ಇವುಗಳ ಜೊತೆಗೆ ಆಧುನಿಕ ಜೀವನಶೈಲಿಯಲ್ಲಿ ನಡೆಯುವ ಸ್ವಾರಸ್ಯಕರ ಪ್ರಸಂಗಗಳಾದ, ಮೊಬೈಲ್, ಟೆಲಿಫೋನ್, ಇಂಟರ್ ನೆಟ್,

ವೃತ್ತಿಲೋಕದ ಅನುಭವಗಳು ಮುಂತಾದುವು ಕೂಡಾ ಲೇಖನಕ್ಕೆ ವಸ್ತುವಾಗಿವೆ. ಕೆಲವು ಲೇಖನಗಳು ಲಘುಬರಹಗಳ ಒಳ್ಳೆಯ ಗುಣಗಳನ್ನು ಹೊಂದಿದ್ದರೂ ಹಾಸ್ಯ ಎನಿಸಿಕೊಳ್ಳದೇ ಸೊರಗಿವೆ. ವ್ಯಾಖ್ಯೆಯ ಚೌಕಟ್ಟಿನೊಳಗೆ ಬರುವ ಅಪ್ಪಟ ಪ್ರಬಂಧಗಳು ಅನೇಕವು ಇದ್ದವು. ಬಹಳ ಕಲಾತ್ಮಕವಾಗಿ ರಚಿಸಿರುವ ಕೆಲವು ಪ್ರಬಂಧಗಳು ಮುಂದಿನ ದಿನಗಳಲ್ಲಿ ಹಾಸ್ಯಕ್ಕೆ ಇನ್ನಷ್ಟು ಮೆರುಗು ನೀಡುವ ಭರವಸೆ ತೋರಿವೆ. ಪೌರಾಣಿಕ ಪಾತ್ರಗಳನ್ನು ಬಳಸಿಕೊಂಡು ಹಾಸ್ಯವನ್ನು ನೀಡುವ ಪ್ರಯತ್ನವನ್ನೂ ಮಾಡಲಾಗಿದೆ. ಹೀಗಾಗಿ ಆಯ್ಕೆ ಪ್ರಕ್ರಿಯೆ ಅಷ್ಟೇನೂ ಸುಲಭದ್ದಾಗಿರಲಿಲ್ಲ.

ಪಡುಕೋಣೆ ರಮಾನಂದರಾಯರ ಹಾಸ್ಯ ಎಲ್ಲ ಕಾಲಕ್ಕೂ ಸಲ್ಲುವಂಥದ್ದು. ಅವರ ನೆನಪಿನಲ್ಲಿ ನಡೆದಿರುವ ಈ ಸ್ಪರ್ಧೆಯಲ್ಲಿ ಅನೇಕ ಲೇಖಕ/ಲೇಖಕಿಯರು ಭಾಗವಹಿಸಿರುವುದು ಗಮನಾರ್ಹ. ಪಡುಕೋಣೆ ರಮಾನಂದರಾಯರಂಥ ಹಿರಿಯ ಹಾಸ್ಯ ಸಾಹಿತಿಗಳ ಲೇಖನಗಳನ್ನು ಇಂದಿನ ಪೀಳಿಗೆಯವರು ಅಭ್ಯಾಸ ಮಾಡಿದ್ದೇ ಆದರೆ ಇನ್ನೂ ಉತ್ಕೃಷ್ಟ ನಗೆಲೇಖನಗಳನ್ನು ಬರೆಯಲು ಸಾಧ್ಯ ಬಹುಮಾನ ವಿಜೇತರಿಗೆ, ಮೆಚ್ಚುಗೆ ಗಳಿಸಿದ ಲೇಖನಗಳ ಲೇಖಕರಿಗೆ ಹಾಗೂ ಈ ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲ ಲೇಖಕ/ ಲೇಖಕಿಯರಿಗೆ ನಮ್ಮ ಅಭಿನಂದನೆಗಳು.

ತೀರ್ಪುಗಾರರು: ಶ್ರೀ ಎಂ.ಎಸ್. ನರಸಿಂಹಮೂರ್ತಿ ಹಾಗೂ ಶ್ರೀ ನಂಪಟೂರು ವಿಶ್ವನಾಥ್



ಉಕ್ತಿ ಚಾಟೂಕ್ತಿ

- ಎನ್. ರಾಮನಾಥ್

ನಾಲ್ವರು ಸಹೋದರರು, ನಾಲ್ವರು ಸಹೋದರಿಯರ ಅಪರೂಪದ ಮದುವೆ ಒಂದೇ ದಿನ, ಒಂದೇ ಮಂಟಪದಲ್ಲಿ - ಸುದ್ದಿ

ಮಂದಾನಿಲ ರಗಳೆ ॥ ಸರಸರ ಸರಸದಿ ಸರಿಯುವ ಸುತೆಯರ
ಸರಾಗ ಲಗ್ನದಿ ಸುಖವೊಂದೆಡೆಯೋ
ಸರಸರ ಸರಿದಾ ಸುತರೊಂದೇದಿನ
ಪರಿಣಯ ಪಡುಗಳು! ದುಃಖವೀಬದಿಯು

★★★

ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಖಾಸಗಿ ವಲಯದಲ್ಲೂ ಮೀಸಲಾತಿ ತರುತ್ತೇನೆ -ಮಾಯಾವತಿ

ಮೀಸಲಾತಿಯ ಮಾಲೆ ರಾಜಕೀಯದ ಲೀಲೆ
ಹೊರಗೆ ಸುಂದರ ಒಳಗೆ ಕಂದರ ಕಪಟದಾ ಜ್ವಾಲೆ

★★★

ಕೈ ಮಿಲಾಯಿಸಿದ ಕಾಂಗ್ರೆಸ್ ಮುಖಂಡರು - ಸುದ್ದಿ

ಶ್ವಾನಕೆ ಶ್ವಾನಂ ಕವಿಗೋ ಕಬ್ಬಿಗ ಪೆಣ್ಣಿಗೆ ಪೆಣ್ಣೇ ಶತ್ರುವು ಜಗದೊಳು
ಮಾನಕೆ ಅಂಜದೆ ಕೈಗುಣ ತೋರ್ದುದು ಸಹಜವು ಇಂತಹ ಪಕ್ಷದ ಗಣದೊಳು

★★★

ದತ್ತಪೀಠ ಹಿಂದೂಗಳಿಗೆ ಸೇರಿದ್ದು - ಚಿ.ಮೂ.

ಹಿಂದೂ ದೇಶವು ಹೊಂದಿಹ ಸಕಲವು ಹಿಂದೂ ಜನತೆಗೆ ಸೇರಿದ್ದೇ
ಹಿಂದೂ ದೇಶದಿ ನಿಂದಿಹ ಸಕಲರು ಹಿಂದುಗಳೆಂಬುದೆ ಸುಸಂಹಿತೆ.

★★★

ಕುಮಾರಸ್ವಾಮಿ ಆರೋಗ್ಯಕ್ಕಾಗಿ ಪ್ರಾರ್ಥನೆ - ಸುದ್ದಿ

ಭಿಷಜರಾ ಜಾಣ್ಮೆಯೊಳು ಅನುಮಾನವಿಹುದೇನು
ಈಶನೊಳು ಬೇಡಿಕೆಯ ನೊಡ್ಡ ಕಾರಣವೇನು?
ಭೇಷಾದ ಭಿಷಜರೇ ಸರ್ಜರಿಯ ಗೈದಿರಲು
ಲೇಸೇನು ಅಂಧಾನುಕರಣೆಯಂ ಅಪ್ಪುವುದು?

★★★

ಮುಸ್ಲಿಮರೇಕೆ ಕಲಾಂ, ಪ್ರೇಂಜೀ ಮತ್ತಿತರ ಮಹಾತ್ಮರ ಆದರ್ಶಗಳನ್ನು ಸ್ವೀಕರಿಸಬಾರದು? - ವಿ.ಕ.ದ ಅಂಕಣಕಾರ

ಮೇರು ಶಿಖರ ಏರಲಿಕ್ಕೆ ಹಿರಿಯ ಶ್ರಮವು ಬೇಕಿದೆ
ಜಾರುಬಂಡೆ ಜಾರಲಿಕ್ಕೆ ಕಿರಿಯ ಜ್ಞಾನ ಸಾಕಿದೆ

★★★

Mailing Date
5th of every month
Mailed at: Rajajinagar - PO

CPMG/KA/BGW-544/2006-2008
RNI-KAR-KAN / 2005 / 15457

Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.
Printed at: Ravi Graphics, 53/8, 2nd Main Road, Industrial Town, Rajajinagar, Bangalore - 560 010. Ph : 2330 5999.
Editor: M. SHIVAKUMAR